**<u>In the court of 1st Addl. District and Sessions Judge, Davanagere.</u>**
**<u>S.C. 05/2020</u>**

P.W.
C.W.
Duly sworn on 17-11-2023

| | | |
|---|---|---|
| Name Sri: Smt | :: | Dr. Lohita M N |
| Name of Father/ Husband | :: | M Nagappa |
| Age | :: | 52 years |
| Designation | :: | Senior specialist, C.G hospital, Davangere. |
| Residing at | | Davanagere. |

From 2017 to till this date I have been working as a Senior specialist in District Hospital, Davanagere.

On 21-12-2018 The CPI of extension police station has requested me to conduct postmortem examination of dead body of Smt. Vasantha B H W/o. N S Srinivas, aged about 35 years, R/o Kuvempu Nagar, MCC B block, Davanagere, who died with the alleged history of hanging.

Accordingly, on the same day I conducted postmortem examination of dead body at mortuary of our hospital in between 10-00 am to 11-30 am.

I mentioned clothes and articles on the body in my report. The dead body is of a female aged about 35 years measuring 162 CM in length, moderately built and poorly nourished. Eyes are partially closed. Pupils mid dilated. Cornea clear on both sides. Conjunctive is clear. No visible external injuries on the body other than ligature mark in the neck and two abrasions on the neck near the said mark. Regor mortise present all over the body. Postmortem staining present over both legs.

Ligature material:- red and cream colored designed saree is encircling the neck with knot on right side of neck.

Ligature mark:- Patterned brownish coloured ligature mark present in the upper part of neck above the thyroid cartilage touching under aspect of chin, running upwards and backwards towards nape of the neck. Margins are faded in their outer parts with knot mark on right side of neck just lateral to midline touching under aspect chin. Ligature mark is measuring 30 cm in length and width of mark :- varies from 03 cm to 5 cm.

Situation:- Upper margin is touching under aspect of chin, touching right side of angle of mandible 1 cm below the right ear, and 2 cm below left ear.

There are tow abrasions over left sub-mandibular area each of size 2 x 1 cm and 1 x 1 cm

ON INTERNAL EXAMINATION

All the internal organs are intact and congested. Stomach is empty. No unusual smell present.

Dissection of neck:- On reflection of skin of neck there is no blood extra vasation in platysma , fascial, planes, muscular, and inter muscular spaces. No lacerated injuries of soft tissue structures of neck. No fracture of thyroid and hyoid cartilage.

Ligature mark in the neck is brownish in colour and anti-mortem in nature. Time since death 12 to 24 hours.

Opinion as to the cause of death:-

The deceased died to asphyxia consequent upon hanging.

Now I see the post mortem report, it is marked as Ex.P.36 and my signature is marked as Ex.P.36(a).

On the same day I conducted postmortem examination of dead body of Ku.Anushke D/o. N S Srinivas, aged about 7 years, R/o Kuvempu Nagar, MCC B block, Davanagere, who died with the alleged history of hanging.

Accordingly, on the same day I conducted postmortem examination of dead body at mortuary of our hospital in between 11-30 am to 01-00 pm.

I mentioned clothes and articles on the body in my report. The dead body is of a female child, aged about 7 years measuring 132 CM in length, moderately built and poorly nourished. Eyes are partially closed. Pupils mid dilated. Cornea clear on both sides. Conjunctive is clear. No visible external injuries on the body, other than ligature mark in the neck. Regor mortise present all over the body. Postmortem staining present over both legs.

Ligature material:- Red and cream colored designed saree is encircling the neck with knot on right side of neck.

Ligature mark:- Patterned brownish coloured ligature mark present in the upper part of neck above the thyroid cartilage touching under aspect of chin, running upwards and backwards towards nape of the neck. Margins are faded in their outer parts with knot mark on right side of neck just lateral to midline touching under aspect chin. Ligature mark is measuring 25 cm in length and width of mark :- varies from 02 cm to 4 cm.

Situation:- Upper margin is touching under aspect of chin, touching right side of angle of ramus of mandible, 1 cm below the right ear, and 2 cm below left ear.

ON INTERNAL EXAMINATION

All the internal organs are intact and congested. Stomach contains semi digested food particles. No unusual smell present.

Dissection of neck:- On reflection of skin of neck there is no blood extra vasation in platysma , fascial, planes, muscular, and inter muscular spaces. No lacerated injuries of soft tissue structures of neck. No fracture of thyroid and hyoid cartilage.

Ligature mark in the neck is brownish in colour and anti-mortem in nature. Time since death 12 to 24 hours.

Opinion as to the cause of death:-

The deceased died to asphyxia consequent upon hanging.

Now I see the post mortem report, it is marked as Ex.P.37 and my signature is marked as Ex.P.37(a).

Now I see the ligature material collected by me , it is already marked as MO.1 and 2. Now I see the cloths of both deceased and it is marked as MO.3 to 10.

**Cross examination:** by Sri CTH advocate for accused persons.

Accused counsel present, submits no cross.

Re-examination:- Nil.

(Typed to my detection in Open Court)

R, O, I and A C,

1st Addl. District Judge,
Davanagere.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

PW- 15

CW- 23

ಪ್ರ. ಬೋ. ದಿನಾಂಕಃ 17-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕುಮಾರಸ್ವಾಮಿ |
| ತಂದೆ/ಗಂಡನ ಹೆಸರು | : | ಬಿ ಈಶ್ವರಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ , ದಾವಣಗೆರೆ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು 2015 ರಿಂದ ಜುಲೈ-2022 ರ ವರೆಗೆ ದಾವಣಗೆರೆ ಲೋಕೋಪಯೋಗಿ ಇಲಾಖೆಯಲ್ಲಿ ಮೇಲ್ಕಂಡಂತೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.11-01-2019 ರಂದು ಪೊಲೀಸ್ ವೃತ್ತ ನಿರೀಕ್ಷಕರು , ಕೇಂದ್ರ ವೃತ್ತ , ದಾವಣಗೆರೆ ರವರು ಈ ಪ್ರಕರಣದ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಲು ಕೋರಿದ್ದು ಅದರಂತೆ ದಿ.26-01-2019 ರಂದು ದಾವಣೆರೆ ಬಡಾವಣೆ ಪೊಲೀಸ್ ಠಾಣಾ ಪೇದೆ ರಾಮಾಂಜನೇಯ ಕೊಂಡಿ ರವರು ನನ್ನನ್ನು ಕೃತ್ಯ ನಡೆದ ಸ್ಥ,ಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿದ್ದು , ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿ , ಕಛೇರಿಯಲ್ಲಿ ಪಕ್ಕಾ ನಕಾಶೆ ತಯಾರಿಸಿ ಕೊಟ್ಟಿರುತ್ತೇನೆ.

ನಾನು ಈ ದಿನ ಕಚ್ಚಾ ನಕಾಶೆ ಹಾಜರುಪಡಿಸುತ್ತಿದ್ದೇನೆ. ಅದನ್ನು ಈಗ ನಿಪಿ.34 ಎಂದು , ಸಾಕ್ಷಿಯ ಸಹಿಯನ್ನು ನಿಪಿ.34(ಎ) ಎಂದು ಗುರುತಿಸಲಾಯಿತು. ಪಕ್ಕಾ ನಕಾಶೆಯನ್ನು ನಿಪಿ.35 ಎಂದು , ಸಾಕ್ಷಿಯ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ– ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರ ಪರ ಆರ್ ಪಿ ವಕೀಲರಿಂದ .

ಪೊಲೀಸರಿಗೆ ಅನುಕೂಲವಾಗುವ ರೀತಿ ಕಚ್ಚಾ ನಕಾಶೆಯನ್ನು ತಯಾರಿಸಿ , ಪಕ್ಕಾ ನಕಾಶೆಯನ್ನು ತಯಾರಿಸಿ ನೀಡಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

PW- 14

CW- 21

ಪ್ರ. ಬೋ. ದಿನಾಂಕಃ 25-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ದರ್ಶನ್ |
| ತಂದೆ/ಗಂಡನ ಹೆಸರು | : | ನಾಗರಾಜ್ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಎಂ ಸಿ ಸಿ ಬಿ ಬ್ಲಾಕ್ ನ ಕುವೆಂಪು ನಗರದ 3 ನೇ ಕ್ರಾಸಿನಲ್ಲಿರುವ ಶಂಕರ್ ಲೀಲಾ ಕಲ್ಯಾಣ ಮಂಟಪದ ಹತ್ತಿರ ಇರುವ ಡೋರ್ ನಂ.3371-24 ಎ ವಾಸದ ಮನೆ ನನ್ನದಾಗಿರುತ್ತದೆ. ಸದರಿ ಮನೆಯನ್ನು ಒಂದು ವರ್ಷದ ಹಿಂದೆ ಶ್ರೀಮತಿ ವಸಂತ ರವರಿಗೆ ರೂ.8,000/- ಬಾಡಿಗೆಗೆ ಕೊಟ್ಟಿದ್ದೆ. ಸದರಿ ಮನೆಯಲ್ಲಿ ಸದರಿ ವಸಂತ , ಆಕೆಯ ಗಂಡ ಶ್ರೀನಿವಾಸ ಮತ್ತು ಅವರ ಮಕ್ಕಳು ವಾಸ ಮಾಡುತ್ತಿದ್ದರು. ನನ್ನ ತಾಯಿ ಸುನಂದ ಹಾಗೂ ವಸಂತ ರವರ ಮಧ್ಯ ಸದರಿ ಮನೆಗೆ ಸಂಬಂಧಿಸಿದಂತೆ ಒಂದು ವರ್ಷಕ್ಕೆ ಅಗ್ರಿಮೆಂಟ್ ಆಗಿತ್ತು. ನನ್ನ ತಾಯಿಗೆ ವಯಸ್ಸಾಗಿರುವುದರಿಂದ ನಾನೇ ಎಲ್ಲವನ್ನು ನಿಂತುಕೊಂಡು ಮಾಡಿದ್ದೇನೆ. ಹನ್ನೊಂದು ತಿಂಗಳು ಕಳೆದ ನಂತರ ಪುನಃ ಒಪ್ಪಂದ ಮುಂದುವರೆಯಿತು , ಆದರೆ ಆ ನಂತರ ಅಗ್ರಿಮೆಂಟ್ ಮಾಡಿಸಿರುವುದಿಲ್ಲ. ಸದರಿ ವಸಂತ ತನ್ನ ಮಗಳನ್ನು ನೇಣು ಹಾಕಿ , ತಾನೂ ಸಹ ನೇಣುಹಾಕಿಕೊಂಡಿದ್ದಾಳೆ ಎಂದು ಗೊತ್ತಾಯಿತು. ರಾಕೇಶ್ ಎನ್ನುವವನು ವಸಂತಳ ಮನೆಗೆ ಬಂದು ಹೋಗುತ್ತಿದ್ದ , ಅವರಿಬ್ಬರ ಮಧ್ಯ ಅನೈತಿಕ ಸಂಬಂಧ ಇತ್ತು ಎಂದು ಗೊತ್ತಾಯಿತು. ಆತ ಮದುವೆ ಮಾಡಿಕೊಳ್ಳುತ್ತಾನೆ ಎನ್ನುವ ವಿಚಾರಕ್ಕೆ ಆಕೆ ನೇಣು ಹಾಕಿಕೊಂಡಿದ್ದಾಳೆ ಎಂದು ನನಗೆ ಗೊತ್ತಾಯಿತು. ಆಕೆಯ ಸಾವಿಗೆ ರಾಕೇಶನೇ ಕಾರಣನಾಗಿರುತ್ತಾನೆ.

ಪಾಟೀ ಸವಾಲುಃ– ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದ.

ನಾವು ವಾಸ ಮಾಡುತ್ತಿರುವ ಮನೆ ಮತ್ತು ಶ್ರೀನಿವಾಸ್ ರವರಿಗೆ ಬಾಡಿಗೆಗೆ ಕೊಟ್ಟ ಮನ ಸುಮಾರು ಅರ್ಧ ಕಿಮಿ ದೂರದಲ್ಲಿರುತ್ತದೆ. ವೈಯಕ್ತಿಕವಾಗಿ ನನಗೆ ಈ ಕೇಸಿನ ಬಗ್ಗೆ ಮಾಹಿತಿ

ಇಲ್ಲ. ಶ್ರೀನಿವಾಸ ರವರ ಮಾತು ಕೇಳಿ ರಾಕೇಶನ ಕಿರುಕುಳದಿಂದ ಆಕೆ ಮೃತಪಟ್ಟಿದ್ದಾಳೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅವರಿಬ್ಬರ ಸಾವಿಗೂ , ರಾಕೇಶನಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

PW- 13

CW- 19

ಪ್ರ. ಬೋ. ದಿನಾಂಕಃ 25-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಸಿದ್ದಪ್ಪ |
| ತಂದೆ/ಗಂಡನ ಹೆಸರು | : | ಬೀರಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಪಿಗ್ಮಿ ಕಲೆಕ್ಷನ್ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ಬರವಣಿಗೆ ನನ್ನದೆ ಆಗಿರುತ್ತದೆ. ಮೃತ ವಸಂತ ನನ್ನ ಚಿಕ್ಕಮ್ಮನ ಮಗಳು.

ದಿ.18-12-2020 ರಂದು ಸಂಜೆ 5-30 ರಿಂದ 6-00 ಗಂಟೆ ಸಮಯದಲ್ಲಿ ನನ್ನ ತಂಗಿಯ ಗಂಡ ಸುರೇಶ್ ಎನ್ನುವವರು ನನಗೆ ಫೋನ್ ಕರೆ ಮಾಡಿ , ವಸಂತ ಮತ್ತು ಆಕೆಯ ಮಗಳು ಇಬ್ಬರು ಸೇರಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ತಿಳಿಸಿದರು. ನಾನು ಕೂಡಲೇ ಮೃತಪಟ್ಟ ಸ್ಥಳ ಕುವೆಂಪು ನಗರ , 3 ನೇ ಕ್ರಾಸಿನ ಮನೆಗೆ ಹೋದೆ. ನಾನು ಹೋದಾಗ ಪೊಲೀಸರು ಮತ್ತು ಇತರೆ ಜನರು ಸೇರಿದ್ದರು. ಅವರೆಲ್ಲರೂ ಬಂದು ಹಗ್ಗದಿಂದ ಎರಡು ಶವಗಳನ್ನು ಇಳಿಸಿದರು. ಆ ನಂತರ ನನ್ನ ತಂಗಿ ಗಂಡ ಶ್ರೀನಿವಾಸ ರವರು ದೂರು ಬರೆದುಕೊಡಿ ಎಂದು ಹೇಳಿದರು. ಅವರು ಹೇಳಿದಂತೆ ನಾನು ದೂರನ್ನು ಮೃತಪಟ್ಟ ಮನೆಯಲ್ಲಿಯೇ ಬರೆದಿರುತ್ತೇನೆ. ರಾಕೇಶ್ ಎನ್ನುವವನು ವಸಂತಳ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಎಂದು ನನಗೆಅಲ್ಲಿ ಗೊತ್ತಾಯಿತು.ಆತ ಆಕೆಗೆ ಬಹಳ ಪೀಡಿಸುತ್ತಿದ್ದ , ಹಣ ಮತ್ತು ಬಂಗಾರವನ್ನು ಆಕೆಯಿಂದ ಬಹಳ ಪಡೆದುಕೊಂಡಿದ್ದ ಎಂದು ಗೊತ್ತಾಯಿತು. ಆ ವಿಚಾರ ಗೊತ್ತಾಗಿ ನನ್ನ ತಂಗಿ ಗಂಡ ಬಿಗಿ ಮಾಡಿದ್ದರಿಂದ ದುಡ್ಡು ಸಿಗದಂತೆ ಆಗಿದ್ದರಿಂದ ಆತನ ಕಾಟ ಜಾಸ್ತಿಯಾಯಿತು ಎಂದು ಆಕೆ ಆಕೆಯ ಮಗಳನ್ನು ನೇಣು ಹಾಕಿ ಆಕೆಯೂ ಸಹ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ಅವರಿಬ್ಬರ ಸಾವಿಗೆ ರಾಕೇಶನೇ ಕಾರಣ ಎಂದು

ಗೊತ್ತಾಯಿತು.

<u>ಪಾಟೀ ಸವಾಲುಃ–</u> ಆರೋಪಿಪರ ಶ್ರೀ ಸಿ.ಟಿ.ಹೆಚ್ ವಕೀಲರಿಂದ.

ಈ ಘಟನೆ ನಡೆಯುವ ಮೊದು ಅಕ್ರಮ ಸಂಬಂಧದ ಬಗ್ಗೆನನಗೆ ಗೊತ್ತಿರಲಿಲ್ಲ..ತೀರಿಕೊಂಡ ದಿನವೇ ಮೃತಳ ಮಗಳು ಭಾವನಾ ಳನ್ನು ನಾನು ವಿಚಾರಣೆ ಮಾಡಿದಾಗ ಆಕೆ ಎಲ್ಲಾ ವಿಚರವನ್ನು ಹೇಳಿದ್ದಾಳೆ. ಭಾವನಾ ಕಡೆಯಿಂದ ವಿಚಾರವನ್ನು ನಾನು ತಿಳಿದುಕೊಂಡೆ ಎಂದು ನಾನು ಪೊಲೀಸರ ಮುಂದೆ ಹೇಳಿದ ಬಗ್ಗೆ ನೆನಪಿರುವುದಿಲ್ಲ. ಆರೋಗೂ , ಅವರಿಬ್ಬರ ಸಾವಿಗೂ ಯಾವುದೇ ಸಂಬಧವಿಲ್ಲ ಎನ್ನುವುದು ಸರಿಯಲ್ಲ. ಗಂಡ ಹೆಂಡತಿ ಸಂಬಂಧ ಸರಿ ಇರಲಿಲ್ಲ ಎನ್ನುವುದು ಸರಿಯಲ್ಲ. ಗಂಡ ಕಿರುಕುಳ ಕೊಟ್ಟಿದ್ದರಿಂದ ಆಕೆ ನೇಣುಹಾಕಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. ಶ್ರೀನಿವಾಸರವರು ನನ್ನ ಮೂಲಕ ಸುಳ್ಳು ದೂರು ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ.

<u>ಮರುವಿಚಾರಣೆ</u> ಃ- ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

PW- 12

CW- 14

ಪ್ರ. ಬೋ. ದಿನಾಂಕಃ 25-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಶೈಲಜಾ |
| ತಂದೆ/ಗಂಡನ ಹೆಸರು | : | ಜೆ ಕೊಟ್ರೇಶ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಾವಗೆರೆಯ ಸರಸ್ವತಿ ಬಡಾವಣೆಯ ನಮ್ಮ ಮನೆಯಲ್ಲಿ ನಾನು , ನನ್ನ ಗಂಡ ಮತ್ತು ನನ್ನ ಮಗ ವಾಸವಾಗಿದ್ದೇವೆ. ನನ್ನ ಗಂಡ ನಿವೃತ್ತ ಶಿಕ್ಷಕರಾಗಿದ್ದಾರೆ. ವಸಂತ ಗಂಡ ಶ್ರೀನಿವಾಸ ನಮ್ಮ ಎದುರು ಮನೆಯಲ್ಲಿ ವಾಸವಾಗಿದ್ದಾರೆ. ಸದರಿ ವಸಂತ ಮೃತಪಟ್ಟಿದ್ದಾರೆ.

ದಿ.20-12-2018 ರಂದು ಸಂಜೆ 5-10 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಮುಂದೆ ನಿಂತಿದ್ದಾಗ ವಸಂತಳ ಮಗಳು ನನ್ನ ಬಳಿ ಬಂದ , ಆಂಟಿ , ನಮ್ಮ ಅಮ್ಮ ಯಾಕೋ ಕದ ತೆಗೆಯುತ್ತಿಲ್ಲ ಅಂತಾ ಹೇಳಿ ಫೋನ್ ಕೊಡಿ ಎಂದು ಕೇಳಿದಳು. ನಾನ ಅದರಂತೆ ಆಕೆಗೆ ಫೋನ್ ಕೊಟ್ಟೆ . ಆಕೆ ನನ್ನ ಫೋನ್ ನಿಂದ ಅವರ ಅಮ್ಮನ ನಂಬರ್ ಗೆ ಫೋನ್ ಮಾಡಿದ್ದಳು. ನಾನು ಆಗ ಮನೆಯ ಒಳಗಡೆ ಹೋದೆ . ಆಕೆ ಫೋನ್ ಮಾಡಿದ ನಂತರ ನನಗೆ ಕೊಟ್ಟು ಹೋದಳು.

ಬಹಳ ಹೊತ್ತು ಆದ ನಂತರ ವಸಂತರವರ ಮನೆಯ ಬಳಿ ಜನ ಸೇರಿದ್ದರು. ನಾನು ನಮ್ಮ ಮನೆಯ ಬಳಿ ನಿಂತುಕೊಂಡು ನೋಡಿದ್ದೆ. ಆಗ ಅವಳ ಅಪ್ಪಾಜಿ ಅಲ್ಲಿಗೆ ಬಂದಿದ್ದರು , ಆಗ ಕದ ತೆಗೆದು ನೋಡಿದಾಗ ವಸಂತ ಮತ್ತು ವಸಂತಳ ಮಗಳು ಇಬ್ಬರೂ ನೇಣು ಹಾಕಿಕೊಂಡು ತೀರಿದ್ದರು.

ಆರೋಪಿ ರಾಕೇಶ್ ನನಗೆ ಗೊತ್ತಿಲ್ಲ. ಅವರಿಬ್ಬರೂ ತೀರಿಕೊಳ್ಳಲು ಏನು ಕಾರಣ ನನಗೆ ಗೊತ್ತಿಲ್ಲ. ಅಲ್ಲಿದ್ದ ಜನರು ಬೇರೆಯವರ ಸಂಬಂಧಹೊಂದಿದ್ದರ ಸಲುವಾಗಿ ಈ ರೀತಿ ನೇಣು

ಹಾಕಿಕೊಂಡಿದ್ದಾಳೆ ಎಂದು ಮಾತನಾಡುತ್ತಿದ್ದರು. ಪೊಲೀಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ ಆಗಾಗ ಮೃತಳ ಮನೆಗೆ ಬಂದು ಹೋಗುತ್ತಿದ್ದ ಆಕೆಯ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ಆತ ಮೃತಳಿಂದ ಬಂಗಾರ ಮತ್ತು ಹಣ ಕೊಡು ಎಂದು ಆಕೆಗೆ ಪೀಡಿಸುತ್ತಿದ್ದ. ಆ ನಂತರ ಆತ ಬೇರೆ ಮದುವೆಯಾಗುತ್ತಾನೆ ಎಂದು ವಸಂತಳಿಗೆ ಗೊತ್ತಾದ ನಂತರ ಬೇರೆ ಮದುವೆಯಾಗಬೇಡ ಎಂದು ಆತನಿಗೆ ಹೇಳಿದಾಗ ನೀನು ಸಾಯುವುದಾದರೆ ಸಾಯಿ, ನಾನು ಬೇರೆ ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ , ಆದ್ದರಿಂದ ವಸಂತ ಮತ್ತು ಆಕೆಯ ಮಗಳು ನೇಣುಹಾಕಿಕೊಂಡಿದ್ದಾರೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.33 ಎಂದು ಗುರುತಿಸಲಾಯಿತು. ಸದರಿ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎ ಜಿ ಎನ್ ಫಾರ್ ಸಿ ಟಿ ಹೆಚ್ ವಕೀಲರಿಂದಃ

ಶ್ರೀ ಸಿ ಟಿ ಹೆಚ್ ವಕೀಲರ ಪರವಾಗಿ ಶ್ರೀಎಂ ಆರ್ ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಸಮಂಜಸ ಕಾರಣ ಇಲ್ಲದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ: 05/2020

PW- 11

CW- 17

ಪ್ರ. ಬೋ. ದಿನಾಂಕಃ 05-07-2023

ಹೆಸರು ಶ್ರೀ/ಶ್ರೀಮತಿ : ಡಿ.ಹೆಚ್.ಉಷಾದೇವಿ
ತಂದೆ/ಗಂಡನ ಹೆಸರು : ಕೆ ಸುರೇಶ್
ವಯಸ್ಸು : 44 ವರ್ಷ
ಉದ್ಯೋಗ : ಮನೆ ಕೆಲಸ
ವಾಸ : ದಾವಣಗೆರೆ.

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಮ್ಮ ತಂದೆ ತಾಯಿಗೆ ನಾವು ನಾಲ್ಕು ಜನ ಮಕ್ಕಳು. ಮೃತ ವಸಂತ ನನ್ನ ತಂಗಿ, ಆಕೆಯನ್ನು ಚಾಸಾ-1 ರವರಿಗೆ ಕೊಟ್ಟು ಲಗ್ನ ಮಾಡಲಾಗಿತ್ತು. ನನ್ನ ತಂಗಿಗೆ ಇಬ್ಬರು ಮಕ್ಕಳು ಅವರೆಂದರೆ ಭಾವನಾ ಮತ್ತು ಮೃತ ಅನುಷ್ಕಾ. ಚಾಸಾ-1 ರವರು ವ್ಯಾಪಾರ ಮಾಡುತ್ತಿದ್ದರು. ಅವರು ಮೊದಲು ವಿನೋಬಾ ನಗರದ 1 ನೇ ಮುಖ್ಯ ರಸ್ತೆ, 6 ನೇ ಅಡ್ಡ ರಸ್ತೆಯಲ್ಲಿ ವಾಸ ಮಾಡುತ್ತಿದ್ದರು. ಅದು ಅವರ ಸ್ವಂತ ಮನೆಯಾಗಿತ್ತು. ಅವರ ಮನೆಯಲ್ಲಿಯೇ ಗಂಡ ಹೆಂಡತಿ ಮತ್ತು ಮಕ್ಕಳು ವಾಸ ಮಾಡುತ್ತಿದ್ದರು. ಆ ನಂತರ ಅವರು ಕು.ವೆಂಪು ನಗರದ 13 ನೇ ಕ್ರಾಸಿನಲ್ಲಿ ವಾಸ ಮಾಡುತ್ತಿದ್ದರು. ನನಗೆ ಬಿಡುವಾದಾಗೆಲ್ಲ ಅವರ ಮನೆಗೆ ಹೋಗುತ್ತಿದ್ದೆ. ಆಕೆಯೂ ಸಹ ನಮ್ಮ ಮನೆಗೆ ಬಂದು ಹೋಗುತ್ತಿದ್ದಳು. ನನ್ನ ತಂಗಿ ಮನೆ ಬಿಟ್ಟು ಬೇರೆ ಕಡೆ ಹೋಗುತ್ತೇವೆ ಎಂದು ನಮ್ಮ ಬಳಿ ಹೇಳುತ್ತಿದ್ದಳು. ಅದಕ್ಕೆ ನಾನು ನನ್ನ ತಾಯಿ ಸ್ವಂತ ಮನೆ ಬಿಟ್ಟು ಯಾಕೆ ಬೇರೆ ಕಡೆ ಹೋಗುತ್ತೀಯಾ ಎಂದು ಕೇಳಿದ್ದೇವು ಅದಕ್ಕೆ ಅವಳು ರಾಕೇಶ್ ಬಂದು ಹೋಗುತ್ತಿರುತ್ತಾನೆ , ಆದ್ದರಿಂದ ಸ್ವಲ್ಪ ದಿನ ಬೇರೆ ಕಡೆ ವಾಸ ಮಾಡುತ್ತೇವೆ ಎಂದು ಹೇಳಿದ್ದಳು. ಮೊದಲು ನಮಗೆ ರಾಕೇಶ್ ಬಂದು ಹೋಗುವ ವಿಚಾರ ಗೊತ್ತಿರಲಿಲ್ಲ, ಆದರೆ ಆಕೆಯ ಮಗಳಿಂದ ಮತ್ತು ಆಕೆಯ ಯಜಮಾನರಿಂದ ಬರುತ್ತಿರುತ್ತಾನೆ ಹೋಗುತ್ತಿರುತ್ತಾನೆ ಎಂಬ ವಿಚಾರ ಗೊತ್ತಾಯಿತು.

ದಿ.20-12-2018 ರಂದು ನನ್ನ ತಂಗಿಯ ಮಗಳು ಭಾವನಾ ಶಾಲೆಯಿಂದ ಬಂದು

ನನಗೆ ಕರೆ ಮಾಡಿದಳು, ಅಮ್ಮ ಬಾಗಿಲು ತೆಗೆಯುತ್ತಿಲ್ಲ , ಬನ್ನಿ ಎಂದು ತಿಳಿಸಿದಳು. ಆಗ ನಾನು ಮತ್ತು ನನ್ನ ತಾಯಿ ಹೋದೆವು. ನಾವು ಸಹ ಬಾಗಿಲು ಬಡಿದೆವು , ತೆಗೆಯಲಿಲ್ಲ. ಸ್ವಲ್ಪ ಹೊತ್ತಿಗೆ ಫಿರ್ಯಾದಿ ಸಹ ಬಂದರು, ಅವರು ಬಾಗಿಲು ಬಡಿದರು , ತೆಗೆಯಲಿಲ್ಲ. ಅಲ್ಲೆ ಪಕ್ಕದಲ್ಲಿದ್ದ ಕಲ್ಲಿನಿಂದ ಕಿಟಕಿ ಗ್ಲಾಸನ್ನು ಒಡೆದು, ಬಾಗಿಲು ಒಳಗಡೆಯಿಂದ ಬಾಗಿಲು ಲಾಕನ್ನು ತೆಗೆಸಿರುತ್ತೇವೆ. ನಾವು ಒಳಗಡೆ ಹೋಗಿ ನೋಡಿದಾಗ ನನ್ನ ತಂಗಿ ವಸಂತ ಮತ್ತು ಆಕೆಯ ಮಗಳು ಅನುಷ್ಕಾ ನೇಣು ಹಾಕಿಕೊಂಡಿದ್ದರು. ನನ್ನ ತಂಗಿ ಮತ್ತು ಆಕೆಯ ಮಗಳ ಸಾವಿಗೆ ಆರೋಪಿ ರಾಕೇಶ್ ಕಾರಣನಾಗಿರುತ್ತಾನೆ. ಸಾಕ್ಷಿ ನಿಪಿ.5, 6 ಮತ್ತು 18 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಯನ್ನು ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿದ್ದಾರೆ.

ಪಾಟೀ ಸವಾಲುಃ– ಆರೋಪಿ ಪರ ಶ್ರೀ ಎ ಜಿ ಎನ್ ಫಾರ್ ಸಿ ಟಿ ಹೆಚ್ ವಕೀಲರಿಂದಃ

ವಿನೋಬಾ ನಗರದಲ್ಲಿದ್ದ ಮನೆಯ ಕೆಳಭಾಗದಲ್ಲಿ ಫಿರ್ಯಾದಿಯ ಅಣ್ಣ ಮತ್ತು ಅವರ ಕುಟುಂಬದವರು ವಾಸ ಮಾಡುತ್ತಿದ್ದರು. ಅವರ ಮನೆಯಲ್ಲಿ ಒಟ್ಟು ಐದು ಜನ ವಾಸ ಮಾಡುತ್ತಿದ್ದರು.

ನನ್ನ ತಂಗಿ ಮನೆಯನ್ನು ಖಾಲಿ ಮಾಡಿ ಸ್ವಲ್ಪ ದಿನ ಬೇರೆ ಕಡೆ ಹೋಗುತ್ತೇನೆ ಎಂದು ಹೇಳಿದಾಗ ನಾನು , ನನ್ನ ತಾಯಿ ಸ್ವಂತ ಮನೆ ಬಿಟ್ಟು ಬೇರೆ ಯಾಕೆ ಹೋಗುತ್ತೀಯಾ ಎಂದು ಕೇಳಿದಾಗ ಆಕೆ ರಾಕೇಶ್ ಬಂದು ಹೋಗುತ್ತಾನೆ ಆದ್ದರಿಂದ ಬೇರೆ ಕಡೆ ಹೋಗುತ್ತೇವೆ ಎಂದು ಹೇಳಿದ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಸಾಕ್ಷಿ - ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ತಂಗಿ ರಾಕೇಶನ ವಿಚಾರವನ್ನು ನನ್ನ ಮುಂದೆ ಹೇಳಿಲ್ಲ. ಆಕೆಯ ಮಗಳು ಮತ್ತು ಆಕೆಯ ಗಂಡನಿಂದ ವಿಚಾರ ನನಗೆ ಗೊತ್ತಾಗಿದೆ.

ನನ್ನ ತಂಗಿಯ ಮಗಳು ಮತ್ತು ಗಂಡ ಇಬ್ಬರೂ ವಸಂತ ಸತ್ತ ಮೇಲೆ ರಾಕೇಶನ ವಿಚಾರವನ್ನು ನಮಗೆ ಹೇಳಿದ್ದಾರೆ. ಇದೇ ಕಾರಣಕ್ಕೆ ಮನೆ ಖಾಲಿ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿತ್ತು. ನನಗೆ ಆರೋಪಿ ವಸಂತಳ ಮನೆಗೆ ಬಂದು ಹೋಗುತ್ತಿದ್ದ ವಿಚಾರ ಮಾತ್ರ ಗೊತ್ತಿದ್ದು , ಮೊದಲು ಅನೈತಿಕ ಸಂಬಂಧ ಇದ್ದ ಬಗ್ಗೆ ಗೊತ್ತಿರಲಿಲ್ಲ ಎಂದು ಪೊಲೀಸರಿಗೆ ಹೇಳಿದ್ದೇನೆ. ನನ್ನ ತಂಗಿ ಆರೋಪಿ ಬಂದು ಹೋಗುತ್ತಿದ್ದ ಎಂದು , ಮನೆ ಖಾಲಿ ಮಾಡುತ್ತಿದ್ದೇನೆ ಎಂದುನನ್ನ ಮುಂದೆ ಹೇಳಿದ್ದಳು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಅವರಿಬ್ಬರ

ಸಾವಿಗೆ ಆರೋಪಿಯೇ ಕಾರಣ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಅವರಿಬ್ಬರೂ ಸತ್ತ ನಂತರ ಆಕೆಯ ಗಂಡ ಮತ್ತು ಮಗಳು ಅನೈತಿಕ ಸಂಬಂಧದ ಬಗ್ಗೆ ನನ್ನ ಮುಂದೆ ಹೇಳಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಆ ರೀತಿ ನಾನು ಪೊಲೀಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. ವಸಂತಳ ಕುಟುಂಬದ ವೈಮನಸ್ಸಿನಿಂದ ನೇಣು ಹಾಕಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ.

<u>ಮರುವಿಚಾರಣೆ</u> ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

PW- 10

CW- 13

ಪ್ರ. ಬೋ. ದಿನಾಂಕಃ 05-07-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮನೋಜ್ |
| ತಂದೆ/ಗಂಡನ ಹೆಸರು | : | ಜಗದೀಶ್ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಸಿವಿಲ್ ಇಂಜಿನೀಯರ್ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ -ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

2018 ರಲ್ಲಿ ನಾನು ದಾವಣಗೆರೆಯಲ್ಲಿ ಇಂಜಿನೀಯರಿಂಗ್ ವಿದ್ಯಾಭ್ಯಾಸ ಮಾಡಿದ್ದೇನೆ. ಆರೋಪಿ ನನಗೆ ಗೊತ್ತು. ಆತ ನಮ್ಮ ಮನೆ ಇರುವ ಕ್ರಾಸ್ ನಲ್ಲೇ ವಾಸ ಮಾಡುತ್ತಿದ್ದ. ಮೃತರಾದ ವಸಂತ ಮತ್ತು ಅನುಷ್ಕಾ ರವರು ನನಗೆ ಆರೋಪಿತನಕಡೆಯಿಂದ ನನಗೆ ಗೊತ್ತು. ಆರೋಪಿ ವಸಂತ ಎನ್ನುವವರ ಜೊತೆ ನನಗೆ ಸಂಬಂಧವಿದೆ ಎಂದುನನಗೆ ಹೇಳಿದ್ದ . ಆರೋಪಿ ಸದರಿ ವಸಂತ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದ. ನಂತರ ಮೃತ ವಸಂತ ರವರು ಕು.ವೆಂ.ಪು. ನಗರಕ್ಕೆ ಮನೆಯನ್ನು ಬದಲಾಯಿಸಿದರು. ನನ್ನ ಅಂಜಿನೀಯರಿಂಗ್ ನ ಒಂದು ವಿಷಯದಲ್ಲಿ ಅನುತ್ತೀರ್ಣನಾಗಿದ್ದರಿಂದ ಮನೆಯಲ್ಲಿದ್ದುಕೊಂಡು ನಾನು ವಿಧ್ಯಾಭ್ಯಾಸ ಮಾಡುತ್ತಿದ್ದೆ. ಆಗ ಆರೋಪಿ ನನಗೆ ಪರಿಚಯವಾಗಿದ್ದ ಆತ ತನ್ನ ಗಾಡಿಯಲ್ಲಿ ವಸಂತ ರವರ ಮನೆಯ ಬಳಿ ಡ್ರಾಪ ತೆಗೆದುಕೊಳ್ಳುತ್ತಿದ್ದ. ಈ ರೀತಿ ನಾನು ಹಲವು ಬಾರಿ ಆರೋಪಿಯನ್ನು ವಸಂತ ರವರ ಮನೆಯ ಬಳಿ ಆರೋಪಿಯ ವಾಹದಲ್ಲಿ ಡ್ರಾಪ್ ಮಾಡಿದ್ದೇನೆ. ಆತನನ್ನು ಡ್ರಾಪ್ ಮಾಡಿ , ಆತನ ಬೈಕನ್ನು ಆತನ ಮನೆಯಬಳಿ ಬಿಡುತ್ತಿದ್ದೆ. ಡ್ರಾಪ್ ಕೊಡು ಎಂದು ನನ್ನನ್ನು ಆರೋಪಿ ಕೇಳುತ್ತಿದ್ದಾಗ ನಾನು ಬರುವುದಿಲ್ಲ ಎಂದು ಹೇಳುತ್ತಿದ್ದೆ. ಆದರೂ ಸಹ ಆರೋಪಿ ನನಗೆ ಒತ್ತಾಯ ಮಾಡಿ ಕರೆದುಕೊಡು ಹೋಗುತ್ತಿದ್ದ.

ದಿ.19-08-2018 ರಂದು ಸದರಿ ವಸಂತ ರವರು ಫೋನ್ ಕರೆ ಮಾಡಿ ಆರೋಪಿ ಕಡೆಯಿಂದ ಬಂಗಾರ ವಾಪಸ್ ಕೊಡಿಸು ಆತನ ಸುದ್ದಿಗೆ ನಾನು ಹೋಗುವುದಿಲ್ಲ ಎಂದು ಹೇಳಿದರು. ಪುನಃ ನಾನು ಮನೆಗೆ ಬಂದಾಗ ಮತ್ತೆ ನನಗೆ ಸದರಿ ವಸಂತ ಫೋನ್ ಕರೆ ಮಾಡಿದ್ದು , ನನ್ನ ಮೊಬೈಲ್ ಕರೆಯನ್ನು ನನ್ನ ಅಣ್ಣ ಸ್ವೀಕರಿಸಿರುತ್ತಾರೆ. ಅದರ ಮಾರನೇ ದಿನ

ಆಕೆ ಮತ್ತು ಆಕೆಯ ಮಗಳ ಸಮೇತ ನೇಣು ಹಾಕಿಕೊಂಡು ತೀರಿಕೊಂಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಾಯಿತು. ಆಕೆಯ ಸಾವಿಗೆ ಆರೋಪಿ ಕಾರಣ ಎಂದು ಆಕೆಯ ಗಂಡ ದೂರು ನೀಡಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಯನ್ನು ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿದಿದ್ದಾರೆ.

<u>ಪಾಟೀ ಸವಾಲುಃ–</u> ಆರೋಪಿ ಪರ ಶ್ರೀ ಎ ಜಿ ಎನ್ ಫಾರ್ ಸಿ ಟಿ ಹೆಚ್ ವಕೀಲರಿಂದಃ

ಆರೋಪಿ ವಸಂತಳ ಜೊತೆ ಸಂಬಂಧವಿತ್ತು ಎಂದು ಆರೋಪಿಯೇ ನನ್ನ ಮುಂದೆ ಹೇಳಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ. ಸಾಕ್ಷಿಗೆ ಆ ವಿಚಾರ ಗೊತ್ತಾದ ನಂತರ ಆಕೆಯ ಗಂಡನಿಗೆ ಅಥವಾ ಸಂಬಂಧಿಕರಿಗೆ ಹೇಳಲು ಪ್ರಯತ್ನ ಪಟ್ಟಾ ಎಂದರೆ ಸಾಕ್ಷಿ ಅವರಾರೂ ನನಗೆ ಪರಿಚಯವಿಲ್ಲ ಹಾಗೂ ಅವರ ಮನೆಯನ್ನು ನೋಡಿಲ್ಲ, ನಾನು ಆರೋಪಿ ಎಸ್ ಎಸ್ ಮಾಲ್ ಹತ್ತಿರ ಡ್ರಾಪ್ ತೆಗೆದುಕೊಳ್ಳುತ್ತಿದ್ದರು ಹಾಗೂ ಅವರ ಮನೆಯನ್ನು ನನಗೆ ತೋರಿಸಿಲ್ಲ ಎಂದು ನುಡಿದಿದ್ದಾರೆ. ಆರೋಪಿ ಕು.ವೆಂ.ಪು. ನಗರದಲ್ಲಿದ್ದ ಮನೆಗೆ ಹೋಗುತ್ತಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಆರೋಪಿ ನನಗೆ ಸಂಬಂಧದ ವಿಚಾರ ಹೇಳಿದಾಗ ವಸಂತ ರವರು ಕು.ವೆಂ.ಪು. ನಗರದಲ್ಲಿ ವಾಸ ಮಾಡುತ್ತಿದ್ದರು. ವಿನೋಬ ನಗರದಲ್ಲಿದ್ದ ಸಂದರ್ಭದಲ್ಲಿ ವಸಂತ ರವರ ಯಜಮನರು ಮತ್ತು ವಸಂತ ರವರನ್ನು ನಾನು ನೋಡಿರಲಿಲ್ಲ ಮತ್ತು ಅವರ ಪರಿಚಯ ವಿರಲಿಲ್ಲ. ಆರೋಪಿಯ ತಂದೆ ತಾಯಿಗೆ ಆರೋಪಿ ಹೇಳಿದ ವಿಚಾರವನ್ನು ತಿಳಿಸಿದ್ದಿಯಾ ಎಂದರೆ ಸಾಕ್ಷ ನಾನು ತಿಳಿಸಿಲ್ಲ ಎಂದು ನುಡಿದಿದ್ದಾರೆ. ಆರದೆ ನಾನು ಆರೋಪಿ ಪ್ರೀತಿ ಮಾಡುತ್ತಿದ್ದ ಹುಡುಗಿಗೆ ತಿಳಿಸಿದ್ದೇನೆ. ಆರೋಪಿ ಪ್ರೀತಿ ಮಾಡಿದ ಹುಡುಗಿಯನ್ನೇ ಮದುವೆಯಾಗಿರುತ್ತಾರೆ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ.

ಆರೋಪಿ ಪದೇ ಪದೇ ಡ್ರಾಪ್ ಮಾಡು ಎಂದು ಹೇಳುತ್ತಿದ್ದ ವಿಚಾರವನ್ನು ನಿಮ್ಮ ಮನೆಗೆಯವರಿಗೆ ಹೇಳಿದ್ದಿಯಾ ಎಂದರೆ ಸಾಕ್ಷಿ ಹೇಳಿಲ್ಲ ಎಂದ ನುಡಿಯುತ್ತಾರೆ. ಸಾಕ್ಷಿ - ನನ್ನ ತಂದೆ ತಾಯಿಗೆ ಒಂದು ವಿಷಯದಲ್ಲಿ ನಾನು ಅನುತ್ತೀರ್ಣನಾಗಿದ್ದುದು ಅವರಿಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಮೃತ ವಸಂತ ನನಗೆ ಫೋನ್ ಕರೆ ಮಾಡಿ ಆರೋಪಿಯಿಂದ ಒಡವೆಗಳನ್ನು ಕೊಡಿಸು, ನಾನು ಆತನ ವಿಚಾರಕ್ಕೆ ಹೋಗುವುದಿಲ್ಲ ಎಂದು ಹೇಳಿದ ವಿಚಾರವನ್ನು ನಾನು ಯಾರ ಬಳಿಯೂ ಹೇಳಿಲ್ಲ. ಸಾಕ್ಷಿ ಮುಂದುವರೆದು ನಾನು ಆತ ಪ್ರೀತಿ ಮಾಡುತ್ತಿದ್ದ ಹುಡುಗಿಗೆ ಆತನ ವಿಚಾರ ಹೇಳಿದ್ದರಿಂದ ಆತ ನನ್ನ ಜೊತೆ ಮಾತನಾಡುವುದನ್ನು

ಬಿಟ್ಟಿದ್ದ. ಆದ್ದರಿಂದ ನಾನು ಆ ವಿಚಾರವನ್ನು ಯಾರ ಬಳಿಯೂ ಹೇಳಿಲ್ಲ. ಸದರಿ ವಿಚಾರವನ್ನು ಪೊಲೀಸ್ ಠಾಣೆಗೆ ನಾನು ತಿಳಿಸಿರುವುದಿಲ್ಲ. ಆರೋಪಿ ವಸಂತಳ ಸಾವಿಗೆ ಕಾರಣನಲ್ಲ ಎನ್ನುವುದು ಸರಿಯಲ್ಲ. ಆಕೆ ತನ್ನ ಗಂಡನ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನುವುದು ಸರಿಯಲ್ಲ. ಅವರಿಬ್ಬರ ಸಾವಿಗೆ ಆರೋಪಿ ಕಾರಣನಲ್ಲ ಎನ್ನುವುದು ಸರಿಯಲ್ಲ. ಆರೋಪಿ ವಸಂತಳ ಜೊತೆ ಸಂಬಂಧ ಇದೆ ಎಂದು ಹೇಳಿರುವ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿಕೊಂಡು ಸಂಬಂಧವಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಆರೋಪಿಯ ವಿಚಾರಗಳು ಸುಳ್ಳು ಎಂದು ಹೇಳುವುದು ಸರಿಯಲ್ಲ. ವಸಂತ ರವರು ನನಗೆ ಫೋನ್ ಕರೆ ಮಾಡಿ , ಆರೋಪಿ ಕಡೆಯಿಂದ ಬಂಗಾರ ಕೊಡಿಸು ಎಂದು ಕೇಳಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 08 |
| ಸಿ.ಡಬ್ಲ್ಯೂ: | 10 |
| ಪ್ರ.ಬೋ.ದಿನಾಂಕ: | 05.04.2023 . |

| | |
|---|---|
| ಹೆಸರು ಶ್ರೀ/ಶ್ರೀಮತಿ :: | ರಾಜೇಶ್ |
| ತಂದೆಯ/ಗಂಡನ ಹೆಸರು :: | ಮಲ್ಲಪ್ಪ |
| ವಯಸ್ಸು :: | 56 ವರ್ಷ |
| ಉದ್ಯೋಗ :: | ಪಿಗ್ಮಿ ಕಲೆಕ್ಟರ್ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1, ಮೃತೆಯರಾದ ಅನುಷ್ಕಾ ಮತ್ತು ವಸಂತ ಎನ್ನುವವರು ನನಗೆ ಗೊತ್ತು.

2. ನಾನು ಅನುಷ್ಕಾ ಮತ್ತು ಆಕೆಯ ತಾಯಿ ವಸಂತಾಳ ಮೃತದೇಹಗಳನ್ನು ಸಿ ಜೆ ಆಸ್ಪತ್ರೆಯಲ್ಲಿ ನೋಡಿದ್ದೇನೆ. ಅವರ ಕುಟುಂಬದವರು ಮೊದಲು ವಿನೋಬನಗರದಲ್ಲಿ ವಾಸಮಾಡುತ್ತಿದ್ದರು. ಆನಂತರ ಕುವೆಂಪು ನಗರದಲ್ಲಿ ವಾಸಮಾಡುತ್ತಿದ್ದರು. ರಾಕೇಶ ಎನ್ನುವವನ ಜೊತೆ ಅಕ್ರಮ ಸಂಬಂಧ ಇದುದ್ದರಿಂದ ಅವರು ವಿನೋಬನಗರದಿಂದ

ಮನೆಯನ್ನು ಕುವೆಂಪು ನಗರಕ್ಕೆ ಬದಲಾವಣೆ ಮಾಡಿದ್ದರು. ಮೃತೆ ಅನುಷ್ಕಾರವರು ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಗೊತ್ತಾಯಿತು. ಆಕೆಯ ತಾಯಿ ಆಕೆಯನ್ನು ನೇಣು ಹಾಕಿದ್ದಾರೆ ಎಂದು ಗೊತ್ತಾಯಿತು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿ, ಸಹಿ ಪಡೆದಿದ್ದಾರೆ.

3. ಸಾಕ್ಷಿ ಶವ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-29 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-22 ರಿಂದ 26ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅನುಷ್ಕಾಳ ತಾಯಿ ವಸಂತರವರು ಆರೋಪಿ ಜೊತೆ ಅಕ್ರಮ ಸಂಬಂಧ ಇಟ್ಟುಕ್ಕೊಂಡಿದ್ದ ಹಿನ್ನೆಲೆಯಲ್ಲಿ ಆಕೆ ನೇಣು ಹಾಕಿಕೊಂಡು, ಆಕೆಯ ಮಗಳನ್ನು ನೇಣು ಹಾಕಿದ್ದಾಳೆ ಎಂದು ಗೊತ್ತಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎ ಜಿ ಎನ್ ಫಾರ್ ಸಿ ಟಿ ಹೆಚ್ ವಕೀಲರಿಂದಃ**

4. ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಪೊಲೀಸ್ ಠಾಣೆಯಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿಕೊಂಡು ನಾನು ಹೇಳಿರುವುದು ಎಲ್ಲ ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 08 |
| ಸಿ.ಡಬ್ಲ್ಯೂ: | 13 |
| ಪ್ರ.ಬೋ.ದಿನಾಂಕ: | 31.12.2022 . |

| | |
|---|---|
| ಹೆಸರು ಶ್ರೀ/ಶ್ರೀಮತಿ :: | |
| ತಂದೆಯ/ಗಂಡನ ಹೆಸರು :: | |
| ವಯಸ್ಸು :: | 45 ವರ್ಷ |
| ಉದ್ಯೋಗ :: | ವ್ಯವಸಾಯ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ಮತ್ತು 8 ರವರುಗಳು ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಚಾಸಾ-1 ರವರ ಹೆಂಡತಿ ಹೆಸರು ವಸಂತ. ಅವರುಗಳಿಗೆ ಇಬ್ಬರು ಹೆಣ್ಣು ಮಕ್ಕಳು, ಅವರುಗಳೆಂದರೆ ಭಾವನಾ ಮತ್ತೊಬ್ಬಳ ಹೆಸರು ನೆನಪಿಗೆ ಬರುತ್ತಿಲ್ಲ. ಸದರಿ ವಸಂತ ಮತ್ತು ಆಕೆಯ ಮಗಳು ಚಾಸಾ-1 ರವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ಚಾಸಾ-1 ರವರಿಗೆ ಸ್ವಂತ 3 ಮನೆಗಳು ವಿನೋಬನಗರದಲ್ಲಿ ಇವೆ. ಚಾಸಾ-1 ಮತ್ತು ಆತನ ಕುಟುಂಬದವರು

ಮೃತಪಟ್ಟ ಮನೆಯಲ್ಲಿ ವಾಸಮಾಡುವ ಮೊದಲು ವಿನೋಬನಗರದ ತಮ್ಮ ಸ್ವಂತ ಒಂದು ಮನೆಯಲ್ಲಿ ವಾಸಮಾಡುತ್ತಿದ್ದರು. ವಿನೋಬನಗರದ ಉಳಿದ 2 ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಅಣ್ಣ ತಮ್ಮಂದಿರಿಗೆ ಹೊಂದಾಣಿಕೆ ಆಗಿಲ್ಲ ಎಂದು ಸ್ವಂತ ಮನೆ ಬಿಟ್ಟು ಬೇರೆ ಕಡೆ ವಾಸವಾಗಿದ್ದರು. ಆರೋಪಿ ರಾಕೇಶ ಬಂಗಾರ, ದುಡ್ಡು ಕೊಡು ಎಂದು ವಸಂತರವರಿಗೆ ತೊಂದರೆ ಕೊಡುತ್ತಿದ್ದ ಆ ಕಾರಣದಿಂದ ಅವರು ಸ್ವಂತ ಮನೆಯನ್ನು ಬಿಟ್ಟು ಬಾಡಿಗೆ ಮನೆಗೆ ಹೋಗಿದ್ದರು. ಸದರಿ ವಿಚಾರವನ್ನು ವಸಂತರವರು ತನ್ನ ಗಂಡನಿಗೆ ತಿಳಿಸಿರುತ್ತಾರೆ. ಆರೋಪಿ ವಸಂತರವರು ವಾಸಮಾಡುತ್ತಿದ್ದ ಬಾಡಿಗೆ ಮನೆಗೂ ಹೋಗಿ ಆಕೆಗೆ ಕಿರುಕುಳ ಕೊಡುತ್ತಿದ್ದ. ವಿನೋಬನಗರದಲ್ಲಿ ವಾಸಮಾಡುತ್ತಿದ್ದಾಗ ಆರೋಪಿ ವಸಂತರವರ ಮನೆಯ ಪಕ್ಕದ ಮನೆಯಲ್ಲಿ ಬಾಡಿಗೆಗೆ ಇದ್ದ, ಆಗ ಅವರು ವಿಶ್ವಾಸದಿಂದ ಇದ್ದರು, ಆ ವಿಶ್ವಾಸದಿಂದ ಹಣ ತೆಗೆದುಕೊಳ್ಳುವುದು ವಾಪಸ್ಸುಕೊಡುವುದು ಮಾಡಿ, ಆನಂತರ ಪುನಃ ಹಣ, ಒಡವೆ ಕೊಡು ಎಂದು ಆಕೆಗೆ ಆರೋಪಿ ಕಿರುಕುಳ ಕೊಡುತ್ತಿದ್ದ, ಆಕೆಗೂ ಮತ್ತು ಆರೋಪಿಗೂ ಸಂಬಂಧ ಇತ್ತು, ಆ ಸಲಿಗೆ ಮೇಲೆ ಆತ ಆಕೆಗೆ ಹೆಚ್ಚಿಗೆ ಕಿರುಕುಳ ಕೊಡುತ್ತಿದ್ದ, ಆ ಒಂದು ವಿಚಾರಕ್ಕೆ ಸದರಿ ವಸಂತ ತನ್ನ ಮಗಳನ್ನು ನೇಣು ಹಾಕಿ ಆನಂತರ ತಾನು ನೇಣು ಹಾಕಿಕೊಂಡಿರುತ್ತಾಳೆ.

2. ವಸಂತನ ಹಿರಿಯ ಮಗಳು ಆಕೆಯ ತಂದೆಗೆ ಫೋನ್ ಮಾಡಿ ಮನೆಯ ಬಾಗಿಲು ತೆಗೆಯುತ್ತಿಲ್ಲ ಎಂದು ವಿಚಾರ ತಿಳಿಸಿದಾಗ ಅಕೆಯ ತಂದೆ ಮನೆಯ ಬಳಿ ಹೋಗಿ ಬಾಗಿಲು ಬಡಿದಾಗ ಬಾಗಿಲು ತೆಗೆಯದೇ ಇದುದ್ದರಿಂದ ಪಿರ್ಯಾದಿ, ವಸಂತಳ ತಾಯಿ ಮತ್ತು ಅಕ್ಕಳಿಗೆ ವಿಚಾರ ತಿಳಿಸಿದ್ದು, ಅವರು ಬಂದು ಬಾಗಿಲು ಬಡಿದಾಗ ಬಾಗಿಲು ತೆಗೆಯಲಿಲ್ಲ, ಆಮೇಲೆ ಬಾಗಿಲ ಬಳಿ ಇದ್ದ ಗ್ಲಾಸ್ ನ್ನು ಹೊಡೆದು ಬಾಗಿಲನ್ನು ತೆಗೆದು ನೋಡಿದಾಗ ಅವರಿಬ್ಬರೂ ನೇಣು ಹಾಕಿಕೊಂಡಿರುವುದು ಕಂಡು ಬಂತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ**

3. ನಮ್ಮ ಮನೆಗೂ ವಿನೋಬನಗರದ ಪಿರ್ಯಾದಿಯ ಮನೆಗೂ ಸುಮಾರು 1 ರಿಂದ 2 ಕಿ.ಮೀ ದೂರ ಆಗುತ್ತದೆ. ಪಿರ್ಯಾದಿಯ ಮನೆಯ ಅಕ್ಕಪಕ್ಕ ಮತ್ತು ಎದುರುಗಡೆ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಅವರ ಮನೆಯಲ್ಲಿ ಗಲಾಟೆ ಆದರೆ ಅಕ್ಕ ಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ಸರಿ. ವಸಂತ ಸತ್ತ ನಂತರ ಆರೋಪಿ ವಸಂತಳಿಗೆ ಕಿರುಕುಳ ಮಾಡುತ್ತಿದ್ದ ಎಂದು ಗೊತ್ತಾಗಿರುತ್ತದೆ. ಮೃತೆ ವಸಂತ ನನ್ನ ಚಿಕ್ಕಮ್ಮನ ಮಗಳು. ವಸಂತ ಆಗಲೀ ವಸಂತನ ಗಂಡ ಮತ್ತು ಮಕ್ಕಳಾಗಲೀ ಆಕೆ ಸಾಯುವ ಮೊದಲು ಆರೋಪಿ ಕಿರುಕುಳ ಕೊಡುತ್ತಿದ್ದ ಎನ್ನುವ ವಿಚಾರವನ್ನು ನನಗೆ ಹೇಳಿರುವುದಿಲ್ಲ. ಅದೇ ವಸಂತಳ ತಾಯಿ ಮತ್ತು ಅಕ್ಕಳಿಗೂ ಸಹ ಈ ವಿಚಾರ ಗೊತ್ತಿರಲಿಲ್ಲ. ವಸಂತಳ ಜೊತೆ ಆರೋಪಿಯ ಸಂಬಂಧ ಇತ್ತು ಎಂದು ಆಕೆ ಸತ್ತ ನಂತರ ಆಕೆಯ ಗಂಡ ಮತ್ತು ನನ್ನ ಚಿಕ್ಕಮ್ಮನ ಕಡೆಯಿಂದ ಗೊತ್ತಾಗಿರುತ್ತದೆ. ವಸಂತ ಮತ್ತು ಆಕೆಯ ಗಂಡನ ಮಧ್ಯೆ ಸುಮಾರು 8 ವರ್ಷಗಳ ವಯಸ್ಸಿನ ಅಂತರ ಇದೆ. ಪಿರ್ಯಾದಿ ತನ್ನ ಹೆಂಡತಿಯ ಶೀಲದ ಮೇಲೆ ಶಂಕೆ ಮಾಡಿ ಆಕೆಗೆ ತೊಂದರೆ ಕೊಡುತ್ತಿದ್ದ, ಆ ವಿಚಾರ ನಿಮಗೆ ಗೊತ್ತು ಎಂದು ಪ್ರಶ್ನಿಸಲಾಗಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಆ ರೀತಿ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪಿರ್ಯಾದಿಯ ಮಾತನ್ನು ಕೇಳಿ ಆರೋಪಿ ಮತ್ತು ಮೃತಳಿಗೆ ಸಂಬಂಧ ಇತ್ತು ಆತ ಆಕೆಗೆ ಹಣ ಕೊಡು, ಒಡವೆ ಕೊಡು ಎಂದು ಕಿರುಕುಳ ಕೊಡುತ್ತಿದ್ದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಕೆಯ ದೊಡ್ಡ ಮಗಳಿಂದ ಮುಖ್ಯವಾಗಿ ಎಲ್ಲಾ ವಿಚಾರ ಗೊತ್ತಾಯಿತು ಎಂದು ನುಡಿದಿದ್ದಾರೆ. ದೊಡ್ಡ ಮಗಳಿಂದ

ವಿಚಾರ ಗೊತ್ತಾಯಿತು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ವಸಂತ ಮತ್ತು ಆಕೆಯ ಮಗಳ ಸಾವಿಗೆ ಆರೋಪಿ ಕಾರಣ ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 07 |
| ಸಿ.ಡಬ್ಲ್ಯೂ: | 09 |
| ಪ್ರ.ಬೋ.ದಿನಾಂಕ: | 07.09.2022 . |

| | |
|---|---|
| ಹೆಸರು ಶ್ರೀ/ಶ್ರೀಮತಿ :: | ಮಂಜುನಾಥ ಹೆಚ್ ಬಿ |
| ತಂದೆಯ/ಗಂಡನ ಹೆಸರು :: | ಬೀರಪ್ಪ ಹೆಚ್ ಎಸ್ |
| ವಯಸ್ಸು :: | 45 ವರ್ಷ |
| ಉದ್ಯೋಗ :: | ವ್ಯವಸಾಯ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ–1 ಮತ್ತು 8 ರವರುಗಳು ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಚಾಸಾ–1 ರವರ ಹೆಂಡತಿ ಹೆಸರು ವಸಂತ. ಅವರುಗಳಿಗೆ ಇಬ್ಬರು ಹೆಣ್ಣು ಮಕ್ಕಳು, ಅವರುಗಳೆಂದರೆ ಭಾವನಾ ಮತ್ತೊಬ್ಬಳ ಹೆಸರು ನೆನಪಿಗೆ ಬರುತ್ತಿಲ್ಲ. ಸದರಿ ವಸಂತ ಮತ್ತು ಆಕೆಯ ಮಗಳು ಚಾಸಾ–1 ರವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ಚಾಸಾ–1 ರವರಿಗೆ ಸ್ವಂತ 3 ಮನೆಗಳು ವಿನೋಬನಗರದಲ್ಲಿ ಇವೆ. ಚಾಸಾ–1 ಮತ್ತು ಆತನ ಕುಟುಂಬದವರು

ಮೃತಪಟ್ಟ ಮನೆಯಲ್ಲಿ ವಾಸಮಾಡುವ ಮೊದಲು ವಿನೋಬನಗರದ ತಮ್ಮ ಸ್ವಂತ ಒಂದು ಮನೆಯಲ್ಲಿ ವಾಸಮಾಡುತ್ತಿದ್ದರು. ವಿನೋಬನಗರದ ಉಳಿದ 2 ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದರು. ಅಣ್ಣ ತಮ್ಮಂದಿರಿಗೆ ಹೊಂದಾಣಿಕೆ ಆಗಿಲ್ಲ ಎಂದು ಸ್ವಂತ ಮನೆ ಬಿಟ್ಟು ಬೇರೆ ಕಡೆ ವಾಸವಾಗಿದ್ದರು. ಆರೋಪಿ ರಾಕೇಶ ಬಂಗಾರ, ದುಡ್ಡು ಕೊಡು ಎಂದು ವಸಂತರವರಿಗೆ ತೊಂದರೆ ಕೊಡುತ್ತಿದ್ದ ಆ ಕಾರಣದಿಂದ ಅವರು ಸ್ವಂತ ಮನೆಯನ್ನು ಬಿಟ್ಟು ಬಾಡಿಗೆ ಮನೆಗೆ ಹೋಗಿದ್ದರು. ಸದರಿ ವಿಚಾರವನ್ನು ವಸಂತರವರು ತನ್ನ ಗಂಡನಿಗೆ ತಿಳಿಸಿರುತ್ತಾರೆ. ಆರೋಪಿ ವಸಂತರವರು ವಾಸಮಾಡುತ್ತಿದ್ದ ಬಾಡಿಗೆ ಮನೆಗೂ ಹೋಗಿ ಆಕೆಗೆ ಕಿರುಕುಳ ಕೊಡುತ್ತಿದ್ದ. ವಿನೋಬನಗರದಲ್ಲಿ ವಾಸಮಾಡುತ್ತಿದ್ದಾಗ ಆರೋಪಿ ವಸಂತರವರ ಮನೆಯ ಪಕ್ಕದ ಮನೆಯಲ್ಲಿ ಬಾಡಿಗೆಗೆ ಇದ್ದ, ಆಗ ಅವರು ವಿಶ್ವಾಸದಿಂದ ಇದ್ದರು, ಆ ವಿಶ್ವಾಸದಿಂದ ಹಣ ತೆಗೆದುಕೊಳ್ಳುವುದು ವಾಪಸ್ಸುಕೊಡುವುದು ಮಾಡಿ, ಆನಂತರ ಪುನಃ ಹಣ, ಒಡವೆ ಕೊಡು ಎಂದು ಆಕೆಗೆ ಆರೋಪಿ ಕಿರುಕುಳ ಕೊಡುತ್ತಿದ್ದ, ಆಕೆಗೂ ಮತ್ತು ಆರೋಪಿಗೂ ಸಂಬಂಧ ಇತ್ತು, ಆ ಸಲಿಗೆ ಮೇಲೆ ಆತ ಆಕೆಗೆ ಹೆಚ್ಚಿಗೆ ಕಿರುಕುಳ ಕೊಡುತ್ತಿದ್ದ, ಆ ಒಂದು ವಿಚಾರಕ್ಕೆ ಸದರಿ ವಸಂತ ತನ್ನ ಮಗಳನ್ನು ನೇಣು ಹಾಕಿ ಆನಂತರ ತಾನು ನೇಣು ಹಾಕಿಕೊಂಡಿರುತ್ತಾಳೆ.

2. ವಸಂತನ ಹಿರಿಯ ಮಗಳು ಆಕೆಯ ತಂದೆಗೆ ಫೋನ್ ಮಾಡಿ ಮನೆಯ ಬಾಗಿಲು ತೆಗೆಯುತ್ತಿಲ್ಲ ಎಂದು ವಿಚಾರ ತಿಳಿಸಿದಾಗ ಅಕೆಯ ತಂದೆ ಮನೆಯ ಬಳಿ ಹೋಗಿ ಬಾಗಿಲು ಬಡಿದಾಗ ಬಾಗಿಲು ತೆಗೆಯದೇ ಇದುದ್ದರಿಂದ ಪಿರ್ಯಾದಿ, ವಸಂತಳ ತಾಯಿ ಮತ್ತು ಅಕ್ಕಳಿಗೆ ವಿಚಾರ ತಿಳಿಸಿದ್ದು, ಅವರು ಬಂದು ಬಾಗಿಲು ಬಡಿದಾಗ ಬಾಗಿಲು ತೆಗೆಯಲಿಲ್ಲ, ಆಮೇಲೆ ಬಾಗಿಲ ಬಳಿ ಇದ್ದ ಗ್ಲಾಸ್ ನ್ನು ಹೊಡೆದು ಬಾಗಿಲನ್ನು ತೆಗೆದು ನೋಡಿದಾಗ ಅವರಿಬ್ಬರೂ ನೇಣು ಹಾಕಿಕೊಂಡಿರುವುದು ಕಂಡು ಬಂತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ**

3. ನಮ್ಮ ಮನೆಗೂ ವಿನೋಬನಗರದ ಪಿರ್ಯಾದಿಯ ಮನೆಗೂ ಸುಮಾರು 1 ರಿಂದ 2 ಕಿ.ಮೀ ದೂರ ಆಗುತ್ತದೆ. ಪಿರ್ಯಾದಿಯ ಮನೆಯ ಅಕ್ಕಪಕ್ಕ ಮತ್ತು ಎದುರುಗಡೆ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಅವರ ಮನೆಯಲ್ಲಿ ಗಲಾಟೆ ಆದರೆ ಅಕ್ಕ ಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ಸರಿ. ವಸಂತ ಸತ್ತ ನಂತರ ಆರೋಪಿ ವಸಂತಳಿಗೆ ಕಿರುಕುಳ ಮಾಡುತ್ತಿದ್ದ ಎಂದು ಗೊತ್ತಾಗಿರುತ್ತದೆ. ಮೃತೆ ವಸಂತ ನನ್ನ ಚಿಕ್ಕಮ್ಮನ ಮಗಳು. ವಸಂತ ಆಗಲೀ ವಸಂತನ ಗಂಡ ಮತ್ತು ಮಕ್ಕಳಾಗಲೀ ಆಕೆ ಸಾಯುವ ಮೊದಲು ಆರೋಪಿ ಕಿರುಕುಳ ಕೊಡುತ್ತಿದ್ದ ಎನ್ನುವ ವಿಚಾರವನ್ನು ನನಗೆ ಹೇಳಿರುವುದಿಲ್ಲ. ಅದೇ ವಸಂತಳ ತಾಯಿ ಮತ್ತು ಅಕ್ಕಳಿಗೂ ಸಹ ಈ ವಿಚಾರ ಗೊತ್ತಿರಲಿಲ್ಲ. ವಸಂತಳ ಜೊತೆ ಆರೋಪಿಯ ಸಂಬಂಧ ಇತ್ತು ಎಂದು ಆಕೆ ಸತ್ತ ನಂತರ ಆಕೆಯ ಗಂಡ ಮತ್ತು ನನ್ನ ಚಿಕ್ಕಮ್ಮನ ಕಡೆಯಿಂದ ಗೊತ್ತಾಗಿರುತ್ತದೆ. ವಸಂತ ಮತ್ತು ಆಕೆಯ ಗಂಡನ ಮಧ್ಯೆ ಸುಮಾರು 8 ವರ್ಷಗಳ ವಯಸ್ಸಿನ ಅಂತರ ಇದೆ. ಪಿರ್ಯಾದಿ ತನ್ನ ಹೆಂಡತಿಗೆ ಹೆಂಡತಿಯ ಶೀಲದ ಮೇಲೆ ಶಂಕೆ ಮಾಡಿ ಆಕೆಗೆ ತೊಂದರೆ ಕೊಡುತ್ತಿದ್ದ, ಆ ವಿಚಾರ ನಿಮಗೆ ಗೊತ್ತು ಎಂದು ಪ್ರಶ್ನಿಸಲಾಗಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಆ ರೀತಿ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪಿರ್ಯಾದಿಯ ಮಾತನ್ನು ಕೇಳಿ ಆರೋಪಿ ಮತ್ತು ಮೃತಳಿಗೆ ಸಂಬಂಧ ಇತ್ತು ಆತ ಆಕೆಗೆ ಹಣ ಕೊಡು, ಒಡವೆ ಕೊಡು ಎಂದು ಕಿರುಕುಳ ಕೊಡುತ್ತಿದ್ದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆಕೆಯ ದೊಡ್ಡ ಮಗಳಿಂದ ಮುಖ್ಯವಾಗಿ ಎಲ್ಲಾ ವಿಚಾರ ಗೊತ್ತಾಯಿತು ಎಂದು ನುಡಿದಿದ್ದಾರೆ. ದೊಡ್ಡ ಮಗಳಿಂದ

ವಿಚಾರ ಗೊತ್ತಾಯಿತು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ವಸಂತ ಮತ್ತು ಆಕೆಯ ಮಗಳ ಸಾವಿಗೆ ಆರೋಪಿ ಕಾರಣ ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

| | |
|---|---|
| ಪಿ.ಡಬ್ಲ್ಯೂ | 06 |
| ಸಿ.ಡಬ್ಲ್ಯೂ | 08 |
| ಪ್ರ.ಬೋ.ದಿನಾಂಕಃ | 03.08.2022 . |

| | |
|---|---|
| ಹೆಸರು ಶ್ರೀ/ಶ್ರೀಮತಿ :: | ರೇಣುಕಮ್ಮ |
| ತಂದೆಯ/ಗಂಡನ ಹೆಸರು :: | ಹನುಮಂತಪ್ಪ |
| ವಯಸ್ಸು :: | 63 ವರ್ಷ |
| ಉದ್ಯೋಗ :: | ಗೃಹಿಣಿ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಶ್ರೀನಿವಾಸ ನನ್ನ ಅಳಿಯ. ನನಗೆ ಒಟ್ಟು 4 ಜನ ಮಕ್ಕಳು. ಮೃತೆ ವಸಂತ ನನ್ನ 3 ನೇ ಮಗಳು. ಮೃತೆ ವಸಂತಳಿಗೆ ಇಬ್ಬರೂ ಮಕ್ಕಳು, ಅವರುಗಳೆಂದರೆ ಭಾವನಾ ಮತ್ತು ಅನುಷ್ಕಾ ಆರೋಪಿ ಲಾಟರಿ ವ್ಯಾಪಾರ ಮಾಡುತ್ತಿದ್ದ. ನನ್ನ ಮೃತೆ ಮಗಳು, ಆಕೆಯ ಗಂಡ ಮತ್ತು ಮಕ್ಕಳು ಮೊದಲು ವಿನೋಬನಗರದಲ್ಲಿ ನಮ್ಮ ಮನೆಯಲ್ಲಿ ವಾಸಮಾಡುತ್ತಿದ್ದರು. ಅವರು ಒಂದು ಮನೆಯಲ್ಲಿ ವಾಸಮಾಡುತ್ತಿದ್ದರು, ಉಳಿದ 3 ಮನೆಯನ್ನು ಬಾಡಿಗೆಗೆ

ಕೊಟ್ಟಿದ್ದೇವು. ಉಳಿದ 3 ಮನೆಯಲ್ಲಿ ಒಂದು ಮನೆಯನ್ನು ಆರೋಪಿ ರಾಕೇಶ್ ನಿಗೆ ಬಾಡಿಗೆಗೆ ಕೊಟ್ಟಿದ್ದೇವು. ಆನಂತರ ಸದರಿ ನನ್ನ ಮಗಳು, ಅಳಿಯ ಮತ್ತು ಮೊಮ್ಮಕ್ಕಳು ಕುವೆಂಪು ನಗರದಲ್ಲಿ ವಾಸಮಾಡುತ್ತಿದ್ದರು. ಆರೋಪಿ ರಾಕೇಶ ನನ್ನ ಮಗಳ ಜೊತೆ ಸಂಬಂಧ ಇಟ್ಟುಕೊಂಡು ದುಡ್ಡು ಕೊಡು, ಒಡವೆ ಕೊಡು ಎಂದು ಹಿಂಸೆ ಮಾಡುತ್ತಿದ್ದ ಹಾಗೂ ಮಕ್ಕಳಿಗೆ ಚಾಕು ತೋರಿಸಿ ಹೆದರಿಸುತ್ತಿದ್ದ. ಕುವೆಂಪು ನಗರದಲ್ಲಿ ಅವರು ವಾಸಮಾಡುತ್ತಿದ್ದಾಗಲೂ ಸಹ ನನ್ನ ಮಗಳ ಗಂಡ ಮತ್ತು ಮಕ್ಕಳು ಇಲ್ಲದ ಸಮಯದಲ್ಲಿ ಆರೋಪಿ ಅಲ್ಲಿಗೆ ಹೋಗಿ ಸಹ ನನ್ನ ಮಗಳ ಜೊತೆ ಗಲಾಟೆ ಮಾಡುತ್ತಿದ್ದ.

2. ಇಲ್ಲಿಗೆ ಸುಮಾರು 4 ವರ್ಷದ ಹಿಂದೆ ನನ್ನ ಮಗಳು ಮತ್ತು ಮೊಮ್ಮಗಳು ಇಬ್ಬರೂ ಕುವೆಂಪುನಗರದ ಅವರ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ನನ್ನ ಮಗಳು ನೇಣು ಹಾಕಿಕೊಳ್ಳಲು ಆರೋಪಿಯೇ ಕಾರಣ ಆಗಿರುತ್ತಾರೆ. ನನ್ನ ಮೊಮ್ಮಗಳು ಭಾವನಾ ಅಮ್ಮ ಬಾಗಿಲು ತೆಗೆಯುತ್ತಿಲ್ಲ ಎಂದು ಫೋನ್ ಮಾಡಿದ್ದಳು, ನಾವು ಅಲ್ಲಿಗೆ ಹೋಗಿ ನೋಡಿದಾಗ ನನ್ನ ಮಗಳು ಮತ್ತು ಮೊಮ್ಮಗಳು ಅವರ ಮನೆಯಲ್ಲಿ ನೇಣು ಹಾಕಿಕೊಂಡಿದ್ದರು. ಸಾಕ್ಷಿ ನಿಪಿ-3 ರಿಂದ 18 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

3. ಸಾಕ್ಷಿ ನಿಪಿ-3 ರಿಂದ 18 ರ ಫೋಟೋಗಳನ್ನು ನೋಡಿ ಸಾಕ್ಷಿ ಬಾಕ್ಸನಲ್ಲಿ ಅಳುತ್ತಿರುತ್ತಾರೆ. ನ್ಯಾಯಾಲಯ ಸಮಾಧಾನ ಪಡಿಸಿರುತ್ತದೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ</u>**

4. ವಿನೋಬನಗರದ ನನ್ನ ಮಗಳ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳು ಇವೆ

ಎಂದರೆ ಸರಿ. ನನ್ನ ಮಗಳು ಮತ್ತು ಅಕೆಯ ಕುಟುಂಬದವರು 1 ನೇ ಮಹಡಿಯಲ್ಲಿ ವಾಸಮಾಡುತ್ತಿದ್ದರು. ನೆಲಮಹಡಿಯಲ್ಲಿ ನನ್ನ ಅಳಿಯ ಶ್ರೀನಿವಾಸ ಸಹೋದರನ ಕುಟುಂಬದವರು ವಾಸಮಾಡುತ್ತಿದ್ದರು ಎಂದರೆ ಸರಿ. ಅವರ ಮನೆಯಲ್ಲಿ 5 ಜನ ಇದ್ದರು ಎಂದರೆ ಸರಿ. 1 ನೇ ಮಹಡಿಗೆ ಯಾರಾದರೂ ಹೋದರೆ ನೆಲ ಮಹಡಿ ಮನೆಯವರಿಗೆ ಗೊತ್ತಾಗುತ್ತಿತ್ತು ಎಂದರೆ ಸರಿ. ಸಾಕ್ಷಿಗೆ ನಿಮ್ಮ ಮಗಳು ಮತ್ತು ಅಳಿಯ ಮಧ್ಯೆ ಸುಮಾರು 17 ವರ್ಷಗಳ ಅಂತರ ಇದೆ ಎಂದರೆ ಸಾಕ್ಷಿ ಮದುವೆ ಕಾಲಕ್ಕೆ ನನ್ನ ಅಳಿಯನಿಗೆ 30-35 ವರ್ಷ ಆಗಿರಬಹುದು ಆಗ ನನ್ನ ಮಗಳಿಗೆ 20-21 ವರ್ಷ ವಯಸ್ಸಾಗಿತ್ತು ಎಂದು ನುಡಿದಿದ್ದಾರೆ.

5. ಸಾಕ್ಷಿಗೆ ಆರೋಪಿ ನಿಮ್ಮ ಮಗಳಿಗೆ ದುಡ್ಡು ಕೊಡು, ಒಡವೆ ಕೊಡು ಎಂದು ಕೇಳುತ್ತಿದ್ದ ಎಂದು ನಿಮ್ಮ ಮುಂದೆ ಎಂದಾದರೂ ಹೇಳಿದ್ದಾರಾ ಎಂದು ಪ್ರಶ್ನಿಸಲಾಗಿ ನನ್ನ ಮೊಮ್ಮಗಳು ಭಾವನಾ ಹೇಳಿದ್ದಾಳೆ, ನನ್ನ ಮಗಳು ಎಂದು ಹೇಳಿಲ್ಲ ಎಂದು ನುಡಿದಿದ್ದಾರೆ. ಈ ರೀತಿ ಪೊಲೀಸರ ಮುಂದೆ ಹೇಳಿದ್ದೇನೆ. ನನ್ನ ಮೊಮ್ಮಗಳು ಆ ವಿಚಾರವನ್ನು ಹೇಳಿದ ನಂತರ ನಾನು ಆರೋಪಿಯ ತಂದೆ ತಾಯಿಯ ಬಳಿ ಎಂದು ಕೇಳಿಲ್ಲ.ಸಾಕ್ಷಿ ಮುಂದುವರಿದು ಮಗಳು ಸತ್ತಾಗಲೇ ನಮಗೆ ಆ ವಿಚಾರ ಗೊತ್ತಾಯಿತು ಎಂದು ನುಡಿದಿದ್ದಾರೆ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಮಗಳು ಸಾಯುವುದಕ್ಕಿಂತ ಮೊದಲು ನಿಮ್ಮ ಮಗಳಾಗಲೀ, ಮೊಮ್ಮಳಾಗಲೀ, ಅಳಿಯನಾಗಲೀ ನಿಮ್ಮ ಮುಂದೆ ಈ ವಿಚಾರವನ್ನು ಹೇಳಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಸಾಕ್ಷಿ ಮುಂದುವರಿದು ಆರೋಪಿ ಎದುರಿಸುತ್ತಿದುದ್ದರಿಂದ ಅವರು ಯಾರು ಹೇಳಿಲ್ಲ ಎಂದು ನುಡಿದಿದ್ದಾರೆ. ಆ ವಿಚಾರವನ್ನು

ಪೊಲೀಸರ ಮುಂದೆ ನನ್ನ ಮಗಳು ಸತ್ತ ಮೂರು ದಿನದ ನಂತರ ಹೇಳಿದ್ದೇನೆ. ನಾನು ಎಂದು ಸಹ ಆರೋಪಿ ನನ್ನ ಮಗಳ ಮನೆಗೆ ಹೋಗುವುದಾಗಲೀ ಬರುವುದಾಗಲೀ ಮಾಡುವುದನ್ನು ನೋಡಿಲ್ಲ. ನನ್ನ ಅಳಿಯ ಈ ವಿಚಾರವನ್ನು ನನ್ನ ಮಗಳು ಸಾಯುವುದಕ್ಕಿಂತ ಮುಂಚೆ ನನ್ನ ಮುಂದೆ ಹೇಳಿರುವುದಿಲ್ಲ. ನನ್ನ ಅಳಿಯ ನನ್ನ ಮಗಳ ಶೀಲದ ಮೇಲೆ ಅನುಮಾನ ಪಡುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗಂಡ ಹೆಂಡತಿ ಪ್ರೀತಿಯಿಂದ ಇರುತ್ತಿದ್ದರು ಎಂದು ನುಡಿದಿದ್ದಾರೆ. ನಿಮ್ಮ ಮಗಳು ಆರೋಪಿಗೆ ಹಣವಾಗಲೀ ಒಡವೆಯಾಗಲೀ ಕೊಟ್ಟಿರುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನನ್ನ ಮೊಮ್ಮಗಳು ಆ ವಿಚಾರವನ್ನು ನನ್ನ ಮುಂದೆ ಹೇಳಿದ್ದಾಳೆ, ಆದರೆ ನನ್ನ ಮಗಳ ಬಳಿ ಆ ಒಡವೆಗಳು ಇದುದ್ದು ನನಗೆ ಗೊತ್ತಿದೆ ಎಂದು ನುಡಿದಿದ್ದಾರೆ.

6. ನಾಲ್ಕು ಜೊತೆ ಕಿವಿಯೋಲೆ, ಎರಡು ನೇಕ್ಲೇಸ್, ಆರು ಬಳೆಗಳನ್ನು ನನ್ನ ಮಗಳು ಆರೋಪಿಗೆ ಕೊಟ್ಟಿದ್ದಳು. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಅಳಿಯ ನಿಮ್ಮ ಮಗಳಿಗೆ ಆಕೆಯ ಶೀಲದ ಮೇಲೆ ತೊಂದರೆ ಕೊಡುತ್ತಿದ್ದ ಆ ಕಾರಣದಿಂದ ಆಕೆ ತನ್ನ ಮಗಳನ್ನು ನೇಣು ಹಾಕಿ ತಾನು ನೇಣು ಹಾಕಿಕೊಂಡಿದ್ದಾಳೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದಾರೆ. ಅವರಿಬ್ಬರೂ ಮೊದಲಿನಿಂದಲೂ ಸರಿ ಇರಲಿಲ್ಲ ಆ ವಿಚಾರ ನಿಮಗೆ ಗೊತ್ತು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದಾರೆ. ಸಾಕ್ಷಿ ಮುಂದುವರಿದು ರಾಕೇಶ ಬಂದ ಮೇಲೆಯೇ ಈ ಘಟನೆ ಎಲ್ಲಾ ನಡೆದಿದೆ ಎಂದು ನುಡಿದಿದ್ದಾರೆ. ಆರೋಪಿ ನನ್ನ ಮಗಳ ಜೊತೆ ಸಂಬಂಧ ಇಟ್ಟುಕೊಂಡಿದ್ದ, ಆತ ಹಣಕ್ಕೆ ಒಡವೆಗೆ ತೊಂದರೆ ಕೊಡುತ್ತಿದ್ದ ಆದ್ದರಿಂದ ಆಕೆ ಮತ್ತು ಆಕೆಯ ಮೊಮ್ಮಗಳು ನೇಣು ಹಾಕಿಕೊಂಡು ಸತ್ತಿದ್ದಾಳೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ರಾಕೇಶ ನಿಮ್ಮ ಅಜ್ಜ ಅಜ್ಜಿಗೆ

ಸಾಯಿಸುತ್ತೇನೆಂದು ಹೇಳುತ್ತಿದ್ದ ಎಂದು ನನ್ನ ಮೊಮ್ಮಗಳು ಹೇಳಿದ್ದಾಳೆ ಎಂದು ನುಡಿದಿದ್ದಾರೆ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೇನೆ. ನಿಮ್ಮ ಮಗಳು ಮೊಮ್ಮಗಳ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಸಂಬಂಧ ಇದೆ ಎಂದು ನುಡಿದಿದ್ದಾರೆ. ಆರೋಪಿ ನನ್ನ ಮಗಳಿಗೆ ಹಿಂಸೆ ಕೊಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ನನ್ನ ಅಳಿಯನ ವಯಸ್ಸಿನ ಅಂತರವೂ ಸಹ ಆಕೆಯ ಸಾವಿಗೆ ಕಾರಣ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

| | |
|---|---|
| ಪಿ.ಡಬ್ಲ್ಯೂ: | 05 |
| ಸಿ.ಡಬ್ಲ್ಯೂ: | 07 |
| ಪ್ರ.ಬೋ.ದಿನಾಂಕ: | 05.07.2022 . |

| | |
|---|---|
| ಹೆಸರು :: | ಶ್ರೀ ಸುರೇಶ ಕೆ. |
| ತಂದೆಯ ಹೆಸರು :: | ಕರೆಗೌಡಪ್ಪ |
| ವಯಸ್ಸು :: | 50 ವರ್ಷ |
| ಉದ್ಯೋಗ :: | ಅಟೆಂಡರ್, ಬಾಪೂಜಿ ಆಸ್ಪತ್ರೆ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಮೃತೆ ವಸಂತ ನನಗೆ ಗೊತ್ತು. ಆಕೆಯ ಶವವನ್ನು ನೇಣಿನ ಸ್ಥಿತಿಯಲ್ಲಿದ್ದನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಸಾಕ್ಷಿ ಶವಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-28 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಪೊಲೀಸರು ಬಂದು ಮಹಜರು ಬರೆದಾಗ ಸಹಿ ಮಾಡಿದ್ದೇನೆ. ಸದರಿ ಸಹಿಯನ್ನು ಶವದ ಮನೆಯಲ್ಲಿ ಮಾಡಿದ್ದೇನೆ.

2. ಸಾಕ್ಷಿಗೆ ಫೋಟೋವನ್ನು ತೋರಿಸಿದಾಗ ಸಿ.ಜೆ. ಆಸ್ಪತ್ರೆಯ ಶವಗಾರದಲ್ಲಿ ಶವ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದು ನುಡಿದಿದ್ದಾರೆ. ಫೋಟೋವನ್ನು ಈಗಾಗಲೇ ನಿಪಿ–19 ರಿಂದ 26 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ನನ್ನ ಸಂಬಂಧಿಕರು ಸಹ ಇದ್ದರು. ಆಗ ಸಮಯ ಸಂಜೆ ಆಗಿತ್ತು. ಸದರಿ ಆಸ್ಪತ್ರೆಯಲ್ಲಿಯೇ ಮಹಜರಿಗೆ ಸಹಿ ಮಾಡಿದ್ದೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ**

3. ಸಾಕ್ಷಿಗೆ ಶವ ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆ ಎಂರದೆ ಸಾಕ್ಷಿ ಅಕ್ರಮ ಸಂಬಂಧ ಇರುವುದು ಅದನ್ನು ದುರುಪಯೋಗ ಪಡಿಸಿಕೊಂಡಿರುವುದು, ಹಣದ ಆಸೆಗೆ ಕಿರುಕುಳ ಕೊಟ್ಟಿರುವುದನ್ನು ಬರೆದಿದ್ದಾರೆ ಎಂದು ನುಡಿದಿದ್ದಾರೆ. ಅದನ್ನು ನಿಮಗೆ ಯಾರು ಹೇಳಿದ್ದಾರೆ ಎಂದರೆ ಸಾಕ್ಷಿ ವಸಂತಮ್ಮನ ಮಗಳು ನನಗೆ ಹೇಳಿದ್ದಾರೆ. ಸಂಬಂಧದಲ್ಲಿ ವಸಂತಮ್ಮನ ಮಗಳು ನನಗೆ ಮಗಳಾಗಬೇಕು. ವಸಂತಮ್ಮ ನನಗೆ ಸಂಬಂಧ ಆಗಿರುವುದರಿಂದ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

4. ಅಕ್ರಮ ಸಂಬಂಧ ಇತ್ತು ದುರುಪಯೋಗ ಪಡಿಸಿಕೊಂಡು ದುಡ್ಡು ಮತ್ತು ಬಂಗಾರ ಪಡೆದುಕೊಂಡಿದ್ದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.ನಾನು ಮಹಜರಿಗೆಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

Pw.1

ಈ ದಿನ ದಿನಾಂಕಃ 05.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ**

9. ನನಗೆ ಕನ್ನಡ ಓದಲು ಬರುತ್ತದೆ, ಬರೆಯಲು ಬರುವುದಿಲ್ಲ. ದೂರನ್ನು ಬರೆಯಲು ಮಾಹಿತಿಯನ್ನು ನನ್ನ ಮಗಳು ನೀಡಿದ್ದಾಳೆ. ದೂರನ್ನು ನನ್ನ ಮಗಳು ಹೇಳಿದಂತೆ ಬರೆದಿದ್ದೇನೆ, ದೂರಿನ ವಿಚಾರಗಳು ನನಗೆ ವ್ಯಯಕ್ತಿಕ ಮಾಹಿತಿ ಇಲ್ಲ, ಆನಂತರ ಗೊತ್ತಾಗಿರುತ್ತದೆ. ನನಗೂ ನನ್ನ ಹೆಂಡತಿಯ ವಯಸ್ಸಿಗೂ ಸುಮಾರು 10 ವರ್ಷಗಳ ಅಂತರ ಇರುತ್ತದೆ. ಸುಮಾರು 17 ವರ್ಷಗಳ ಅಂತರ ಇರುತ್ತದೆ ಎಂದರೆ ಸರಿಯಲ್ಲ.

10. ವಿನೋಬನಗರದ ನಮ್ಮ ಮನೆಯ ಕೆಳಭಾಗದ ಮನೆಯಲ್ಲಿ ನನ್ನ ಅಣ್ಣ, ಅತ್ತಿಗೆ ಹಾಗೂ ಅವರ ಮಕ್ಕಳು ವಾಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಣ್ಣನ ಮಕ್ಕಳಲ್ಲಿ ಒಬ್ಬ 7 ನೇ ತರಗತಿ, ಮತ್ತೊಬ್ಬ ಪ್ರಥಮ ಪಿಯುಸಿ, ಇನ್ನೊಬ್ಬ 10 ನೇ ತರಗತಿ ವ್ಯಾಸಂಗ ಮಾಡುತ್ತಿದ್ದರು. ಸದರಿ ನಮ್ಮ ಮನೆಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಗಲಾಟೆ ಆದರೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ಸರಿ. ನಮ್ಮ ಮನೆಗೆ ಯಾರಾದರೂ ಬಂದರೆ ನಮ್ಮ ಮನೆಯ ಕೆಳಗಿನ ಮನೆಯವರಿಗೆ ಗೊತ್ತಾಗುತ್ತದೆ ಎಂದರೆ ಸರಿ. ಆರೋಪಿ 3-4 ವರ್ಷಗಳ ಕಾಲ ನಮ್ಮ ಮನೆಯ ಬಾಡಿಗೆದಾರ ಆಗಿದ್ದ. ಆರೋಪಿ ವಾಸ ಮಾಡುತ್ತಿದ್ದ ಮನೆಯ ಮೇಲ್ಭಾಗದ ಮನೆಯಲ್ಲಿ ನಾಗಮ್ಮ ಮತ್ತು ಆಕೆಯ ಮಗ ನಾಗಭೂಷಣ ವಾಸಮಾಡುತ್ತಿದ್ದರು ಎಂದರೆ ಸರಿ. ಅವರ ಮನೆ ಮತ್ತು ನಮ್ಮ ಮನೆಗೂ ಮಧ್ಯದಲ್ಲಿ ಅಂತರ ಇರುತ್ತದೆ. ನಿಮ್ಮ ಮನೆಗೆ ನಿಮ್ಮ ಹೆಂಡತಿಯ ತಂಗಿ ಆಗಾಗ ಬಂದು ಹೋಗುತ್ತಿದ್ದರು ಎಂದರೆ

ಸಾಕ್ಷಿ ಯಾವಾಗಲೋ ಒಮ್ಮೆ ಬರುತ್ತಿದ್ದರು ಎಂದು ನುಡಿದಿದ್ದಾರೆ. ಅವರು ತಿಂಗಳಿಗೆ ಒಮ್ಮೆ ಬರುತ್ತಿದ್ದರು.

11. ಆರೋಪಿ 2017-18 ನೇ ಇಸವಿಯಲ್ಲಿ ಬಂಗಾರದ ಒಡವೆಗಳು ಮತ್ತು ಹಣಕ್ಕೆ ಪೀಡುತ್ತಿದ್ದ ಎಂದು ನನಗೆ ಗೊತ್ತಾಗಿದೆ. ನಮ್ಮಲ್ಲಿ ಚಿನ್ನದ 6 ಬಳೆಗಳು ಇದ್ದವು. ಒಂದು ಚಿನ್ನದ ನೇಕ್ಲೇಸ್, ಚಿನ್ನದ 3 ಜೊತೆ ಹ್ಯಾಂಗಿಗ್ಸ್ ಹಾಗೂ ಸ್ವಲ್ಪ ದುಡ್ಡು ಸಹ ಇತ್ತು. ಆ ಒಡವೆಗಳು ನಿಮ್ಮ ಬಳಿ ಇವೆಯಾ? ಎಂದರೆ ಸಾಕ್ಷಿ ಇಲ್ಲ, ಆರೋಪಿ ತೆಗೆದುಕೊಂಡು ಹೋಗಿದ್ದಾನೆ ಎಂದು ನುಡಿದಿದ್ದಾರೆ. ಸದರಿ ವಿಚಾರವನ್ನು ದೂರಿನಲ್ಲಿ ಬರೆಯಲಾಗಿದೆ. ಆರೋಪಿ ಸದರಿ ಒಡವೆ ಮತ್ತು ಹಣವನ್ನು ಯಾವಾಗ ನಿಮ್ಮ ಹೆಂಡತಿಯಿಂದ ಪಡೆದಿದ್ದಾನೆ ಎಂದು ಹೇಳಲು ಆಗುತ್ತದಾ? ಎಂದರೆ ಸಾಕ್ಷಿ 2017-18 ನೇ ಇಸವಿಯಲ್ಲಿ ಪಡೆದುಕೊಂಡಿದ್ದಾನೆ, ನನ್ನ ಹೆಂಡತಿ ಮತ್ತು ಮಗಳಿಗೆ ಹೊಡೆದಿದ್ದಾನೆ ಎಂದು ನುಡಿದಿದ್ದಾರೆ. ಆರೋಪಿ ಹಲ್ಲೆ ಮಾಡುತ್ತಿದ್ದ ಬಗ್ಗೆ ದೂರು ಕೊಡಲು ಪ್ರಯತ್ನ ಪಟ್ಟಿರಾ ಎಂದರೆ ಸಾಕ್ಷಿ ಆರೋಪಿ ನನ್ನ ಮಗಳಿಗೆ ಅಪ್ಪಾಜಿ ಮುಂದೆ ಹೇಳಬೇಡ ಎಂದು ಬೆದರಿಕೆ ಹಾಕುತ್ತಿದ್ದ ಎಂದು ನುಡಿದಿದ್ದಾರೆ. ದೂರಿನಲ್ಲಿ ಈ ವಿಚಾರವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

12. ನಾನು ಸದರಿ ವಿಚಾರವನ್ನು ನನ್ನ ಹೆಂಡತಿ ತಾಯಿ ಮತ್ತು ಅಕ್ಕನಿಗೆ ಹೇಳಿಲ್ಲ. ಆರೋಪಿ ಈ ರೀತಿ ತೊಂದರೆ ಕೊಡುತ್ತಿದ್ದ ಬಗ್ಗೆ ನಿಮ್ಮ ಅಣ್ಣನ ಸಹಾಯ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಈ ವಿಚಾರ ನಿಮ್ಮ ಅಣ್ಣ ಮತ್ತು ಮನೆಯವರಿಗೆ

ಗೊತ್ತಾಯಿತಾ? ಎಂದರೆ ಸಾಕ್ಷಿ ಅವರಿಗೆ ಗೊತ್ತಾಯಿತು, ಆಗ ನಾನು ಮತ್ತು ನನ್ನ ಅಣ್ಣ ಸೇರಿ ಆರೋಪಿಯ ಜೊತೆ ಜಗಳ ಮಾಡಿದ್ದೇವೆ ಎಂದು ನುಡಿದಿದ್ದಾರೆ. ಈ ಗಲಾಟೆ ಆದ ಮೇಲೆ ಆರೋಪಿಗೆ ಮನೆ ಖಾಲಿ ಮಾಡಿ ಎಂದು ಹೇಳಿದ್ದೇವೆ. ಆ ರೀತಿ ಹೇಳಿದ ಮೇಲೆ ಆರೋಪಿ ಹೊಸ ಮನೆ ಕಟ್ಟಿಸಿಕೊಂಡು ಹೋಗಿರುತ್ತಾನೆ. ಆರೋಪಿ ಮನೆಯಲ್ಲಿ ಆತನ ತಂದೆ ತಾಯಿ ಇದ್ದಾರೆ ಎಂದರೆ ಸರಿ. ನೀವು ಆರೋಪಿಯ ತಂದೆ ತಂದೆ ತಾಯಿ ಮನೆಗೆ ಹೋಗಿ ಈ ವಿಚಾರವನ್ನು ಹೇಳಿದ್ದೀರಾ ಎಂದರೆ ಸಾಕ್ಷಿ ಹೋಗಿ ಹೇಳಿದ್ದೇನೆ, ನಾನು ಒಬ್ಬನೇ ಹೋಗಿ ಹೇಳಿದ್ದೇನೆ ಎಂದು ನುಡಿದಿದ್ದಾರೆ. ಕುವೆಂಪು ನಗರದ ಮನೆಯ ಬಳಿ ಅಕ್ಕಪಕ್ಕದಲ್ಲಿ ಮನೆಗಳು ಇವೆ ಎಂದರೆ ಸಾಕ್ಷಿ ಅದು ಸೈಲೆಂಟ್ ಏರಿಯಾ ಎಂದು ನುಡಿದಿದ್ದಾರೆ. ಆ ಮನೆಯ ಬಳಿ ಗಲಾಟೆ ಆದರೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಮನೆಯ ಬಾಗಿಲು ಹಾಕಿಕೊಂಡು ಗಲಾಟೆ ಮಾಡಿದರೆ ಗೊತ್ತಾಗುವುದಿಲ್ಲ ಎಂದು ನುಡಿದಿದ್ದಾರೆ. ಆರೋಪಿ ಮನೆಯ ಹೊರಗಡೆ ಗಲಾಟೆ ಮಾಡುತ್ತಿದ್ದನೋ ಅಥವಾ ಒಳಗಡೆ ಗಲಾಟೆ ಮಾಡುತ್ತಿದ್ದಾನೋ ಎಂದರೆ ಸಾಕ್ಷಿ ಮನೆಯ ಹೊರಗಡೆ ಗಲಾಟೆ ಮಾಡುತ್ತಿದ್ದ ಎಂದು ನುಡಿದಿದ್ದಾರೆ. ಆ ವಿಚಾರ ಗೊತ್ತಾದ ನಂತರ ಕೂಡಲೇ ದೂರನ್ನು ಕೊಟ್ಟಿಲ್ಲ. ಆ ವಿಚಾರ ನನಗೆ ಗಲಾಟೆ ಸಮಯದಲ್ಲಿ ಗೊತ್ತಾಗಲಿಲ್ಲ, ಆನಂತರ ನನ್ನ ಮಗಳು ಹೇಳಿದ ನಂತರ ನಾನು ದೂರು ಕೊಟ್ಟಿದ್ದೇನೆ. ನೀವು ಯಾವಾಗಲೂ ನಿಮ್ಮಹೆಂಡತಿಯ ಶೀಲದ ಮೇಲೆ ಅನುಮಾನ ಪಡುತ್ತಿದ್ದೀರಿ? ಆಕೆಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ, ನಾವು ಚೆನ್ನಾಗಿ ಇದ್ದೇವು ಎಂದು ನುಡಿದಿದ್ದಾರೆ. ನೀವು ಯಾವಾಗಲೂ ನಿಮ್ಮಹೆಂಡತಿಯ ಜೊತೆ ಗಲಾಟೆ ಮಾಡುತ್ತಿದ್ರಿ? ಆದ್ದರಿಂದ ನೀವೇ ಮನೆ ಖಾಲಿ ಮಾಡಿಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ನಾವು ಯಾವತ್ತೂ ಗಲಾಟೆ ಮಾಡಿಲ್ಲ,

ಚೆನ್ನಾಗಿದ್ದೇವು ಎಂದು ನುಡಿದಿದ್ದಾರೆ. ಆರೋಪಿ ಆ ರೀತಿ ಗಲಾಟೆ ಮಾಡಿದ್ದರೆ ಕೂಡಲೇ ದೂರು ಕೊಡುತ್ತಿದ್ರಿ? ಎಂದರೆ ಸಾಕ್ಷಿ ನಾನು ಇಲ್ಲದೇ ಇದ್ದಾಗ ಗಲಾಟೆ ಮಾಡುತ್ತಿದ್ದ, ನನಗೆ ಗೊತ್ತಾದ ನಂತರ ದೂರು ಕೊಟ್ಟಿದ್ದೇನೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ನಿಮ್ಮ ಕಿರುಕುಳದಿಂದ ನಿಮ್ಮ ಹೆಂಡತಿ ನೇಣು ಹಾಕಿಕೊಂಡು ಸತ್ತಿದ್ದಾಳೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಹೆಂಡತಿ ಚೆನ್ನಾಗಿದ್ದೇವು, ನಾವು ಚೆನ್ನಾಗಿ ಇರೋಣ ಎಂದೆ ಸ್ವಂತ ಮನೆ ಬಿಟ್ಟು ಬೇರೆ ಮನೆಗೆ ಹೋಗಿದ್ದೇವು ಎಂದು ನುಡಿದಿದ್ದಾರೆ. ಆರೋಪಿ ಯಾವತ್ತೂ ಕೂಡ ನಿಮ್ಮ ಮನೆಗೆ ಬಂದಿಲ್ಲ, ನಿಮ್ಮ ಹೆಂಡತಿಗೆ ಯಾವುದೇ ಕಿರುಕುಳ ನೀಡಿಲ್ಲ, ಯಾವುದೇ ಒಡವೆ ಮತ್ತು ಹಣ ಪಡೆದುಕೊಂಡಿಲ್ಲ ಹಾಗೂ ನಿಮ್ಮ ಮಗಳಿಗೆ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದಾರೆ. ನೀವು ಅನುಮಾನ ಪಟ್ಟಿದ್ದರಿಂದ ನಿಮ್ಮ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸಾಕ್ಷಿ ನಾನು ಎಂದು ನನ್ನಹೆಂಡತಿಯ ಮೇಲೆ ಅನುಮಾನ ಪಟ್ಟಿಲ್ಲ, ಆಕೆ ದೇವತೆ ಇದ್ದ ಹಾಗೇ ಎಂದು ನುಡಿದಿದ್ದಾರೆ.

13. ಆರೋಪಿಯ ಮದುವೆ ದಿಃ21.12.2018 ರಂದು ಆಗಿದೆ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ, ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ನಿನ್ನ ಹೆಂಡತಿಯ ಮತ್ತು ನಿನ್ನ ಮಗಳ ಸಾವಿಗೆ ಆರೋಪಿ ಕಾರಣ ಅಲ್ಲ ಎಂದರೆ ಸಾಕ್ಷಿ ಆರೋಪಿಯ ಟಾರ್ಚರ್ ನಿಂದ ನನ್ನ ಹೆಂಡತಿ ಮತ್ತು ಮಗಳು ನೇಣು ಹಾಕಿಕೊಂಡಿದ್ದಾರೆ ಎಂದು ನುಡಿದಿದ್ದಾರೆ. ನಾನು ಆರೋಪಿಯನ್ನು ಕರೆದು ಬುದ್ದಿವಾದ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

Pw.4

ಈ ದಿನ ದಿನಾಂಕಃ 20.04.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯವು ಕೆಲವೊಂದು ಪ್ರಶ್ನೆಗಳನ್ನು ಕೇಳಲಾಗಿ ಸಮರ್ಪಕವಾದ ಉತ್ತರ ಕೊಟ್ಟಿರುತ್ತಾರೆ ಹಾಗೂ ಸಾಕ್ಷಿಯೂ 10 ನೇ ತರಗತಿಯಲ್ಲಿ ಓದುತ್ತಿದ್ದು ಆಕೆಗೆ ಸಂಪೂರ್ಣ ತಿಳುವಳಿಕೆ ಇದ್ದದ್ದು ಕಂಡು ಬರುತ್ತದೆ. ಹೀಗಾಗಿ ಸಾಕ್ಷಿ ವಿಚಾರಣೆ ಮಾಡಲು **ಅನುಮತಿ ನೀಡಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

2. ಆರೋಪಿ ನನ್ನ ತಂದೆ ಇಲ್ಲದ ಸಮಯದಲ್ಲಿ ಮನೆಗೆ ಬರುತ್ತಿದ್ದ ವಿಚಾರ ನನ್ನ ತಂದೆಗೆ ಗೊತ್ತಾದ ನಂತರ ಮನೆಯಲ್ಲಿ ಜಗಳ ಆಗಿತ್ತು. ಆ ರೀತಿ ಜಗಳ ಆದ ನಂತರ ಮನೆಯನ್ನು ಕುವೆಂಪು ನಗರಕ್ಕೆ ಬದಲಾವಣೆ ಮಾಡಿದ್ದರು. ಆ ರೀತಿ ಮನೆ ಬದಲಾವಣೆ ಆದ ನಂತರ ಬೆಳಿಗ್ಗೆ 9.30 ಕ್ಕೆ ಕೆಲಸಕ್ಕೆ ಹೋಗಿ ವಾಪಸ್ಸು ರಾತ್ರಿ 10.00 ಗಂಟೆಗೆ ಬರುತ್ತಿದ್ದರು. ಆ ರೀತಿ ನನ್ನ ತಂದೆ ಕೆಲಸಕ್ಕೆ ಹೋದ ನಂತರ ಆರೋಪಿ ನಮ್ಮ ಮನೆಗೆ ಬರುತ್ತಿದ್ದ. ನಾನು ಮತ್ತು ನನ್ನ ತಂಗಿ ಬೆಳಿಗ್ಗೆ 9.40 ಕ್ಕೆ ಶಾಲೆಗೆ ಹೋಗಿ ಸಂಜೆ 5.30 ಗಂಟೆಗೆ ಬರುತ್ತಿದ್ದೇವು. ನಾವು ಶಾಲೆ ಮುಗಿಸಿ ಮನೆಗೆ ಬಂದ ಸಮಯದಲ್ಲಿ ಆರೋಪಿ ಮನೆಯಲ್ಲಿರುತ್ತಿದ್ದ. ನಾವು ಬಂದ ನಂತರ ಆರೋಪಿ ಮನೆಯಿಂದ ಹೋಗುತ್ತಿದ್ದ. ಆನಂತರ ನಮ್ಮ ತಂದೆ ಉಡುಪಿಗೆ ಮದುವೆಗಾಗಿ ಹೋಗಿದ್ದರು. ಆ ಸಮಯದಲ್ಲಿ ಆರೋಪಿ ಮಧ್ಯಪಾನ ಮಾಡಿ ಮನೆಗೆ ಬಂದು ನಮ್ಮ ತಾಯಿಗೆ ಹೊಡೆಯುತ್ತಿದ್ದ. ನನಗೆ ಮತ್ತು ನನ್ನ ತಂಗಿಗೆ ನೀವು ಯಾರಿಗಾದರೂ

ಹೇಳಿದರೆ ಸಾಯಿಸುತ್ತೇನೆಂದು ಆರೋಪಿ ಹೆದರಿಸುತ್ತಿದ್ದ.

3. ಈ ಸಂದರ್ಭದಲ್ಲಿ ಸಾಕ್ಷಿ ಕಟಕಟೆಯಲ್ಲಿ ಅಳುತ್ತಾ ಸ್ವಲ್ಪ ಸಮಯ ನಿಂತಿರುತ್ತಾರೆ. ನ್ಯಾಯಾಲಯವು ಸಮಾಧಾನ ಪಡಿಸಿರುತ್ತದೆ.

4. ಆ ರೀತಿ ಆರೋಪಿ ಹೊಡೆದಾಗ ನನ್ನ ತಾಯಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟರು. ಆಗ ನಾನು ನನ್ನ ತಾಯಿಯನ್ನು ತಡೆದಿದ್ದೇನೆ. ಅದಾದ ನಂತರ ನಾನು ಮತ್ತು ನನ್ನ ತಾಯಿ ಆರೋಪಿಯ ಮನೆಗೆ ಹೋಗಿದ್ದೇವು. ಆಗ ಆತನ ಮನೆಯ ಮುಂದೆ ಚಪ್ಪರ ಹಾಕಲಾಗಿತ್ತು. ಆ ಸಮಯದಲ್ಲಿ ನನ್ನ ತಾಯಿ ಆರೋಪಿಗೆ ಮೊಬೈಲ್ ಕರೆ ಮಾಡಲಾಗಿ ಆತ ಕರೆ ಸ್ವೀಕರಿಸಲಿಲ್ಲ, ಆದ್ದರಿಂದ ನನ್ನ ತಾಯಿ ಆರೋಪಿ ಸ್ನೇಹಿತ ಮಧುಗೆ ಕರೆ ಮಾಡಿ ಆರೋಪಿ ನನ್ನ ದುಡ್ಡು ಬಂಗಾರ ತೆಗೆದುಕೊಂಡು ಹೋಗಿದ್ದಾನೆ ಅದನ್ನು ಕೊಡಿಸು ಎಂದು ಕೇಳಿದರು. ಆದರೂ ಸಹ ನನ್ನ ತಾಯಿಗೆ ಆರೋಪಿ ಯಾವುದೇ ದುಡ್ಡು, ಬಂಗಾರ ವಾಪಸ್ಸು ಕೊಡಲಿಲ್ಲ.

5. ದಿಃ 20.12.2018 ರಂದು ನನ್ನ ತಂದೆ ಕೆಲಸಕ್ಕೆ ಹೋಗಿದ್ದರು, ಆ ಸಮಯದಲ್ಲಿ ನಾನು ಶಾಲೆಗೆ ಹೋಗಿದ್ದೆ. ನನ್ನ ತಂಗಿಗೆ ಹುಷಾರಿಲ್ಲದೇ ಇದುದ್ದರಿಂದ ಆಕೆ ಮನೆಯಲ್ಲಿಯೇ ಇದ್ದಳು. ಆ ದಿನ ನನ್ನ ತಾಯಿ ನನ್ನನ್ನು ತಬ್ಬಿಕೊಂಡು ಚುಂಬನ ನೀಡಿ ಕಳುಹಿಸಿದರು. ಆನಂತರ ನಾನು ಶಾಲೆ ಮುಗಿಸಿ ಸಂಜೆ 5.00 ಗಂಟೆಗೆ ಮನೆಗೆ ಬಂದೆ. ಮನೆಯ ಬಾಗಿಲು ಹಾಕಿತ್ತು. ನಾನು ಬಾಗಿಲನ್ನು ಬಡಿದೆ ಆದರೆ ತೆಗೆಯಲಿಲ್ಲ, ಆನಂತರ ನಮ್ಮ ಮನೆಯ ಎದುರುಗಡೆ ಇರುವವರ ಫೋನ್ ಪಡೆದು ನನ್ನ ತಾಯಿಗೆ ಕರೆ ಮಾಡಿದೆ ಆದರೆ ನನ್ನ ತಾಯಿ ಫೋನ್ ತೆಗೆಯಲಿಲ್ಲ. ಆನಂತರ ನಾನು ನನ್ನ ತಂದೆಗೆ ಮತ್ತು ಅಜ್ಜಿಗೆ ಕರೆ ಮಾಡಿದೆ. ಆನಂತರ ನನ್ನ ಅಜ್ಜಿ ಮತ್ತು ತಂದೆ ಬಂದರು. ಅವರು ಸಹ ಬಾಗಿಲು ಬಡಿದರು, ನನ್ನ ತಾಯಿ ಬಾಗಿಲು

ತೆಗೆಯಲಿಲ್ಲ. ಆನಂತರ ನನ್ನ ದೊಡ್ಡಮ್ಮ ನನ್ನ ತಂದೆಗೆ ಕಲ್ಲನ್ನು ಕೊಟ್ಟು, ಬಾಗಿಲ ಬಳಿ ಇದ್ದ ಗ್ಲಾಸ್ ನ್ನು ಕಲ್ಲಿನಿಂದ ಹೊಡೆದು ಒಳಗಡೆಯಿಂದ ಕೈಯನ್ನು ಹಾಕಿ ಚಿಲಕ ತೆಗೆದರು. ನನ್ನ ಅಜ್ಜಿ ಮನೆಯ ಒಳಗಡೆ ಹೋಗಿ ನೋಡಲಾಗಿ ನನ್ನ ತಾಯಿ ಮತ್ತು ನನ್ನ ತಂಗಿ ನೇಣು ಹಾಕಿಕೊಂಡಿದ್ದರು.

6. ನನ್ನ ತಾಯಿ ಮತ್ತು ತಂಗಿ ನೇಣು ಸ್ಥಿತಿಯಲ್ಲಿದ್ದ ಫೋಟೋವನ್ನು ನೋಡಿ ಗುರುತಿಸಿ, ಅಳಲು ಪ್ರಾರಂಭಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಪಿ-3 ರಿಂದ 26 ಎಂದು ಗುರುತಿಸಲಾಗಿದೆ.

7. ನನ್ನ ತಾಯಿ ಮತ್ತು ತಂಗಿ ಸಾವಿಗೆ ಆರೋಪಿಯೇ ಕಾರಣ ಆಗಿರುತ್ತಾನೆ. ನಾನು ಈ ಬಗ್ಗೆ ನ್ಯಾಯಾಲಯಕ್ಕೆ ಹೋಗಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹೇಳಿರುವ ತನ್ನ ಹೇಳಿಕೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ</u>

8. ವಿನೋಬನಗರದ ಮನೆಯ ಅಕ್ಕಪಕ್ಕ ಮತ್ತು ಎದುರುಗಡೆ ಹೊಂದಿಕೊಂಡಂತೆ ಸಾಕಷ್ಟು ಮನೆಗಳಿವೆ ಎಂದರೆ ಸರಿ. ಯಾವುದಾದರೂ ಮನೆಯಲ್ಲಿ ಗಲಾಟೆ ಆದರೆ ಅಕ್ಕಪಕ್ಕದವರಿಗೆ ಕೇಳಿಸುತ್ತದೆ ಎಂದರೆ ಸರಿ. ನಾವು ವಿನೋಬನಗರದಲ್ಲಿ ಒಂದನೇ ಮಹಡಿಯಲ್ಲಿ ವಾಸಮಾಡುತ್ತಿದ್ದೇವು. ನೆಲ ಮಹಡಿಯಲ್ಲಿ ನಮ್ಮ ದೊಡಪ್ಪ ವಾಸಮಾಡುತ್ತಿದ್ದರು. ನನ್ನ ದೊಡ್ಡಪ್ಪನ ಹೆಸರು ರಾಜು. ನನ್ನ ದೊಡ್ಡಮ್ಮನ ಹೆಸರು ಲತಾ. ಅವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರೆಲ್ಲರೂ ಒಟ್ಟು 5 ಜನ ಅದೇ ಮನೆಯಲ್ಲಿ ವಾಸಮಾಡುತ್ತಿದ್ದರು ಎಂದರೆ

ಸರಿ. ನನ್ನ ದೊಡಪ್ಪನ ಮಕ್ಕಳು ನನಗಿಂತ ದೊಡ್ಡವರು ಎಂದರೆ ಸರಿ. ಸಾಮಾನ್ಯವಾಗಿ ಯಾರಾದರೂ ಮೊದಲನೇ ಮಹಡಿಯ ನಮ್ಮ ಮನೆಗೆ ಬಂದರೆ ನೆಲಮಹಡಿಯಲ್ಲಿ ವಾಸಿಸುವವರಿಗೆ ಗೊತ್ತಾಗುತ್ತದೆ. ಸಾಕ್ಷಿಗೆ ನೀನು ಯಾವಾಗಾದರೂ ಆರೋಪಿಗೆ ಮನೆಗೆ ಬರಬೇಡ ಎಂದು ಹೇಳಿದ್ದೀಯಾ ಎಂದರೆ ಸಾಕ್ಷಿ ಆತ ನನಗೆ ಹೆದರಿಸುತ್ತಿದ್ದ ಎಂದು ನುಡಿದಿದ್ದಾರೆ. ನೀನು ಆರೋಪಿಗೆ ಬರಬೇಡ ಎಂದು ಹೇಳುತ್ತಿದ್ದೆ ಆಗ ಆತ ಹೆದರಿಸುತ್ತಿದ್ದ ಎಂದು ಪೊಲೀಸರ ಮುಂದೆ ಆಗಲೀ ಕೋರ್ಟಿನಲ್ಲಿ ಆಗಲೀ ಹೇಳಿಲ್ಲ ಎಂದರೆ ಸಾಕ್ಷಿ ಹೇಳಿಲ್ಲ ಎಂದು ನುಡಿದಿದ್ದಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿ ನಿಮ್ಮ ತಾಯಿಗೆ ಹಣ ಕೊಡು ಎಂದು ಪೀಡಿಸುತ್ತಿದ್ದ, ಆ ಸಮಯದಲ್ಲಿ ನಿನ್ನ ತಾಯಿಗೆ ಗಾಯ ಆಗಿತ್ತಾ ಎಂದರೆ ಸಾಕ್ಷಿ ಹೊಡೆಯುತ್ತಿದ್ದ, ಗಾಯ ಆಗಿರಲಿಲ್ಲ ಎಂದು ನುಡಿದಿದ್ದಾರೆ. ಆ ರೀತಿ ಹೊಡೆಯುವ ಸಮಯದಲ್ಲಿ ನೀನೇದರೂ ಕಿರುಚಾಡಿ ಅಕ್ಕಪಕ್ಕದವರನ್ನು ಕರೆಸಲು ಪ್ರಯತ್ನ ಪಟ್ಟಿಯಾ ಎಂದರೆ ಸಾಕ್ಷಿ ಆತ ಹೆದರಿಸುತ್ತಿದ್ದ, ಹತ್ತಿರ ಹೋಗಲು ಬಿಡುತ್ತಿರಲಿಲ್ಲ ಎಂದು ನುಡಿದಿದ್ದಾರೆ. ಆರೋಪಿ ನಮಗೆ ಹೆದರಿಸುತ್ತಿದ್ದ, ಹತ್ತಿರ ಹೋಗಲು ಬಿಡುತ್ತಿರಲಿಲ್ಲ ಎನ್ನುವ ವಿಷಯವನ್ನು ಪೊಲೀಸರ ಮುಂದೆಯಾಗಲೀ ಕೋರ್ಟಿನಲ್ಲಿ ಆಗಲೀ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

9. ಆರೋಪಿ ಮನೆಗೆ ಬಂದು ದುಡ್ಡಿಗೆ ಪೀಡಿಸುತ್ತಾನೆ, ಅಮ್ಮನಿಗೆ ಹೊಡೆಯುತ್ತಾನೆಂದು ನಿಮ್ಮ ದೊಡ್ಡಪ್ಪ ಮತ್ತು ಕುಟುಂಬದವರಿಗೆ ಹೇಳಿ ಸಹಾಯ ಪಡೆದಿದ್ದೀಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಆರೋಪಿ ನಮಗೆ ಸೇರಿದ ನಮ್ಮ ಮನೆಯ ಪಕ್ಕದಲ್ಲಿಯೇ ಬಾಡಿಗೆಗೆ ವಾಸಮಾಡುತ್ತಿದ್ದ ಎಂದರೆ ಸರಿ. ಆರೋಪಿ ಇಲ್ಲದ ಸಮಯದಲ್ಲಿ ಅರೋಪಿಯ ತಂದೆ ತಾಯಿಗೆ ಆರೋಪಿ ಈ ರೀತಿ ನಿನ್ನ ತಾಯಿಗೆ

ಹೊಡೆಯುತ್ತಾನೆ, ದುಡ್ಡು ಕೊಡು ಎಂದು ಪೀಡಿಸುತ್ತಾನೆ ಎಂದು ಹೇಳಿದ್ದೀರಾ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಆರೋಪಿ ನಿನ್ನ ತಾಯಿಗೆ ಹೊಡೆಯುವ ವಿಚಾರ ದುಡ್ಡಿಗೆ ಪೀಡಿಸುವ ವಿಚಾರ ನಿಮ್ಮನ್ನು ಬಿಟ್ಟರೆ ಬೇರೆ ಯಾರು ನೋಡಿಲ್ಲ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿದಿದ್ದಾರೆ. ಈ ವಿಷಯವೂ ಬೇರೆಯವರಿಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನನ್ನ ಅಜ್ಜಿ ರೇಣುಕಮ್ಮ, ದೊಡ್ಡಮ್ಮ ಆಗಾಗ ಮನೆಗೆ ಬರುತ್ತಿದ್ದರು. ಸಾಕ್ಷಿಗೆ ನೀನು ನಿಮ್ಮ ಅಜ್ಜಿಗಾಗಲೀ, ದೊಡ್ಡಮ್ಮನೀಗಾಗಲೀ ಆತ ಇಲ್ಲದೇ ಇದ್ದಂತಹ ಸಮಯದಲ್ಲಿ ಅವರಿಗೆ ಹೇಳಲು ಪ್ರಯತ್ನ ಪಟ್ಟಿಯಾ? ಎಂದರೆ ಸಾಕ್ಷಿ ಆತ ಹೆದರಿಸುತ್ತಿದ್ದ, ಹೇಳಲು ಬಿಡುತ್ತಿರಲಿಲ್ಲ ಎಂದು ನುಡಿದಿದ್ದಾರೆ. ಆರೋಪಿ ಹೆದರಿಸುತ್ತಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದೇನೆ, ಆದರೆ ಅಜ್ಜಿಗೆ ಮತ್ತು ದೊಡ್ಡಮ್ಮನಿಗೆ ಹೇಳಲು ಹೋದರೆ ಆರೋಪಿ ಹೆದರಿಸುತ್ತಿದ್ದ ಎಂದು ಪೊಲೀಸರ ಮುಂದೆ ಮತ್ತು ನ್ಯಾಯಾಲಯದಲ್ಲಿ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

10. ಶಾಲೆಯ ಟೀಚರ್ ಗೆ ಆಗಲೀ ಮತ್ತು ಗೆಳೆಯರಿಗಾಗಲೀ ಈ ವಿಷಯ ಹೇಳಲು ಪ್ರಯತ್ನ ಪಟ್ಟಿಯಾ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಈ ವಿಷಯವನ್ನು ನಿನ್ನ ತಂದೆಗೆ ಹೇಳಲು ಪ್ರಯತ್ನ ಪಟ್ಟಿಯಾ ಎಂದು ಪ್ರಶ್ನಿಸಲಾಗಿ ಆರೋಪಿ ಹೇಳಲು ಬಿಡುತ್ತಿರಲಿಲ್ಲ ಎಂದು ನುಡಿದಿದ್ದಾರೆ. ಅಪ್ಪನಿಗೆ ಹೇಳಲು ಹೋದರೂ ಸಹ ಆರೋಪಿ ಹೆದರಿಸುತ್ತಾನೆ ಎಂದು ಪೊಲೀಸರ ಮುಂದೆ ಮತ್ತು ನ್ಯಾಯಾಲಯದಲ್ಲಿ ಹೇಳಿದ್ದೇನೆ. ನೀನು ನಿನ್ನ ತಂದೆ ಮತ್ತು ತಾಯಿಯ ಮೊಬೈಲ್ ಫೋನ್ ಗಳನ್ನು ಉಪಯೋಗಿಸುತ್ತೀಯಾ? ಎಂದರೆಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ನಾನು ಅಕ್ಕಪಕ್ಕದವರ ಮೊಬೈಲ್ ಫೋನ್ ನ್ನು ಪಡೆದು ತಿಳಿಸಲು ಪ್ರಯತ್ನ ಪಟ್ಟಿಲ್ಲ.

11. ಆರೋಪಿಗೆ ನಮ್ಮ ಮನೆಯಲ್ಲಿಯೇ 4 ಚಿನ್ನದ ಬಳೆಗಳನ್ನು ನನ್ನ ತಾಯಿ ಕೊಟ್ಟಿದ್ದರು. ಈ ವಿಷಯವನ್ನು ನನ್ನ ತಂದೆಗೆ, ನನ್ನ ಸ್ನೇಹಿತರಿಗೆ, ಬೇರೆಯವರಿಗೆ ಯಾರಿಗೂ ಹೇಳಿಲ್ಲ. ಸದರಿ ಬಳೆಗಳನ್ನು ಬ್ಯಾಂಕ್ ನಲ್ಲಿ ಇಟ್ಟಿದ್ದರು, ಸಮಾರಂಭಕ್ಕಾಗಿ ಮನೆಗೆ ತಂದಿದ್ದರು, ಆ ಸಮಯದಲ್ಲಿ ಆರೋಪಿ ಹೆದರಿಸಿ ಪಡೆದುಕೊಂಡಿದ್ದಾನೆ.

12. ನನ್ನ ದೊಡ್ಡಮ್ಮಳಾದ ಲತಾಳಿಗೆ ಆರೋಗ್ಯ ಸರಿ ಇಲ್ಲದ ಕಾರಣ ಅವರನ್ನು ಸದರಿ ರಾಕೇಶನು ಅಂತರಗಟ್ಟೆಯಲ್ಲಿರುವ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿರುತ್ತಾನೆ ವಾಪಸ್ಸು ಬಂದ ಮೇಲೆ ರಾಕೇಶನು ನನ್ನ ದೊಡ್ಡಮ್ಮಳಿಗೆ ಹಣ ನೀಡಲು ಪೀಡಿಸಿರುತ್ತಾನೆ. ಅದೇ ರೀತಿಯಾಗಿ ನನ್ನ ತಾಯಿಗೆ ಕೂಡ ಹಣ ನೀಡುವಂತೆ ತೊಂದರೆ ಕೊಟ್ಟಿರುತ್ತಾನೆ, ಆ ಸಮಯದಲ್ಲಿ ಅವನು ನನ್ನ ತಾಯಿಗೆ ಹೊಡಿ ಬಡಿ ಮಾಡುತ್ತಿದ್ದು, ದುಡ್ಡು ನೀಡದಿದ್ದರೆ ನನ್ನ ತಾಯಿಯನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಬೆದರಿಕೆ ಹಾಕುತ್ತಿದ್ದನು ಎಂದು ಪೊಲೀಸರ ಮುಂದೆ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

13. ನಂತರ ನನ್ನ ತಂದೆ ಮದುವೆಗೆಂದು ಉಡುಪಿಗೆ ಹೋದಾಗ ರಾಕೇಶನು ಮಧ್ಯಪಾನ ಮಾಡಿ ನನ್ನ ತಾಯಿಗೆ ಹೊಡಿಬಡಿ ಮಾಡಿರುತ್ತಾನೆ. ನಾನು ಅದನ್ನು ಬಿಡಿಸಲು ಹೋದಾಗ ನನಗೂ ಹೊಡೆದಿರುತ್ತಾನೆ. ಸದರಿ ರಾಕೇಶ ನನ್ನ ತಾಯಿ ಬಳಿ ಪ್ರತಿದಿನ ರೂ.100 ಪಡೆದುಕೊಂಡು ಹೋಗುತ್ತಿದ್ದನು. ನಂತರ 1-2 ಬಾರಿ ಮನೆಗೆ ಬಂದಿದ್ದು ನನ್ನ ತಾಯಿ ಅವನ ಬಳಿ ಮಾತನಾಡದಿರುವ ಕಾರಣ ಅವನು ಸಿಟ್ಟಾಗಿ ಹೋಗಿರುತ್ತಾನೆ. ನಾನು ಶಾಲೆಗೆ ಹೋಗಬಾರದು ಎಂದು ನನ್ನ ಶಾಲೆಯ ಯೂನಿಫಾರ್ಮ್‌ಗಳನ್ನು ಹರಿದಿರುತ್ತಾನೆ.

ಅದಾದ ನಂತರ ಸದರಿ ರಾಕೇಶನು ನಮ್ಮ ಮನೆಗೆ ಬಂದಿರುವುದಿಲ್ಲ ಎನ್ನುವ ವಿಚಾರವನ್ನು ಪೊಲೀಸರ ಮುಂದೆ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

14. ನನ್ನ ತಾಯಿಯ ಹತ್ಯೆಗೆ ಸದರಿ ರಾಕೇಶ ಕಾರಣನಾಗಿರುತ್ತಾನೆ ಎಂದು ಪೊಲೀಸರ ಮುಂದೆ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

15. ಸಾಕ್ಷಿಗೆ ಆ ಸಮಯದಲ್ಲಿ ನನ್ನ ದೊಡ್ಡಮ್ಮಳಾದ ಲತಾಮ್ಮಳಿಗೆ ಹುಷಾರಿಲ್ಲದಿದ್ದಾಗ ಸುಮಾರು 20 ದಿವಸ ನನ್ನ ತಂದೆಯು ಬೆಂಗಳೂರುಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ದಿನಗಳಲ್ಲಿ ರಾಕೇಶ್ ಮಾಮನು ಪ್ರತಿದಿನ ರಾತ್ರಿ ವೇಳೆ ಮನೆಗೆ ಬರುತ್ತಿದ್ದರು. ನಂತರ ಬೆಳಿಗ್ಗೆ 6.00 ಗಂಟೆ ಸುಮಾರಿಗೆ ಎದ್ದು ಮನೆಗೆ ಹೋಗುತ್ತಿದ್ದರು. ಈ ವಿಚಾರಕ್ಕೆ ಮನೆಯಲ್ಲಿ ಗಲಾಟೆ ನಡೆದಿದ್ದರಿಂದ ಈಗ್ಗೆ ಒಂದುವರೆ ವರ್ಷಗಳ ನಂತರ ನಮ್ಮ ತಂದೆ ತಾಯಿಯವರು ದಾವಣಗೆರೆ ಕುವೆಂಪು ನಗರದ 3 ನೇ ಕ್ರಾಸ್ ನಲ್ಲಿ ಬಾಡಿಗೆ ಮನೆ ಮಾಡಿದರು ಎಂದು ನ್ಯಾಯಾಲಯದಲ್ಲಿ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

16. ಸಾಕ್ಷಿಗೆ ಅದೇ ಸಮಯದಲ್ಲಿ ನಾವು ಬಾಡಿಗೆ ಮನೆಯಲ್ಲಿದ್ದಾಗ, ನಮ್ಮ ತಂದೆಯು ಕೆಲಸಕ್ಕೆಂದು ಬೆಳಿಗ್ಗೆ 9.15 ರಿಂದ 9.30 ಗಂಟೆ ಸುಮಾರಿಗೆ ಮನೆಯಿಂದ ಹೋದ ಕೂಡಲೇ ಪ್ರತಿದಿನ ರಾಕೇಶ್ ಮಾಮ ಇವರು ಮನೆಗೆ ಬರುತ್ತಿದ್ದರು. ನಂತರ ನಾವು ಮತ್ತು

ಅನುಷ್ಕಾ ಆಟೋದಲ್ಲಿ ಸ್ಕೂಲಿಗೆ ಹೋಗುತ್ತಿದ್ದೇವು. ನಂತರ ಸ್ಕೂಲಿನಿಂದ ಸಂಜೆ 5.00 ಗಂಟೆ ಸುಮಾರಿಗೆ ನಾವಿಬ್ಬರು ಮನೆಗೆ ಬಂದಾಗ, ರಾಕೇಶ್ ಮಾವ ಮನೆಯಲ್ಲಿ ಇರುತ್ತಿದ್ದರು. ನಂತರ ಸಂಜೆ 6-7 ಗಂಟೆ ಸುಮಾರಿಗೆ ನನ್ನ ತಾಯಿಯು ನಮಗೆ ಮತ್ತು ರಾಕೇಶ್ ಮಾವನಿಗೆ ಹಾರ್ಲಿಕ್ಸ್ ಕೊಡ್ತಾ ಇದ್ದರು. ಇದನ್ನು ಕುಡಿದು ರಾಕೇಶ್ ಮಾವನು ಯಾರಿಗಾದರೂ ಹೇಳಿದರೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಹೆದರಿಸುತ್ತಿದ್ದನು. ಇದರಿಂದ ರಾಕೇಶ್ ಮಾಮನು ನಮಗೆ ಗಲಾಟೆ ಮಾಡಿ ಹೊಡೆಯುತ್ತಿರುವ ವಿಷಯವನ್ನು ನಾವು ಯಾರಿಗೂ ಹೇಳುತ್ತಿರಲಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

17. ಸಾಕ್ಷಿಗೆ ಒಂದು ವಾರದ ಹಿಂದೆ ನನ್ನ ತಂದೆಯು ಯಾರದೋ ಮದುವೆಗೆಂದು ಹೋಗಿದ್ದಾಗ ಡ್ರಿಂಕ್ಸ್ ಬಾಟ್ಲಿ ತಂದಿದ್ದನು ತುಂಬಾ ಕೆಟ್ಟ ಸ್ಮೆಲ್ ಇತ್ತು ಅದನ್ನು ಕುಡಿದು ನಮ್ಮ ಅಮ್ಮನಿಗೆ ಹೊಡೆಯುತ್ತಿದ್ದನು. ನಾವು ಹೆದರಿಕೊಂಡು ಅಮ್ಮನ ಹತ್ತಿರ ಹೋಗುತ್ತಿರಲಿಲ್ಲ. ನಂತರ ರಾಕೇಶ್ ಮಾಮನು ಬೆಳಿಗ್ಗೆ ಮನೆಯಿಂದ ಹೋದ್ರು, ನಂತರ ನನ್ನ ತಂದೆಯು ರಾತ್ರಿ ಮನೆಗೆ ಬಂದರು. ಇದಾದ ನಂತರ ಎರಡು ಟೈಮ್ ಮನೆಗೆ ಬಂದಾಗ ನಮ್ಮ ತಾಯಿಯು ರಾಕೇಶ್ ಮಾಮನಿಗೆ ಮಾತನಾಡಿಸಲಿಲ್ಲ. ಇದರಿಂದ ರಾಕೇಶ್ ಮಾಮನು ಸಿಟ್ಟಾಗಿ ಹೋದ್ರು, ಆಮೇಲೆ ನಮ್ಮ ಮನೆಗೆ ಬರಲಿಲ್ಲ. ನನ್ನ ತಾಯಿಯು ಸಾಯುವುದುಕ್ಕಿಂತ ಹಿಂದಿನ ದಿನ ಬುಧವಾರ ರಾತ್ರಿ 7 ಗಂಟೆ ಸುಮಾರಿಗೆ ನನ್ನ ತಾಯಿಯು ನನ್ನನ್ನು ಮತ್ತು ಅನುಷ್ಕಾಳನ್ನು ಕರೆದುಕೊಂಡು ರಾಕೇಶ್ ಮಾಮನ ಸ್ವಂತ ಮನೆಯಾದ ದಾವಣಗೆರೆ ವಿನೋಬನಗರದ 10 ನೇ ಕ್ರಾಸ್ ನಲ್ಲಿ ಕರೆದುಕೊಂಡು ಹೋದಾಗ, ರಾಕೇಶ್ ಮಾಮನ

ಮನೆಯ ಮುಂದೆ ತೆಂಗಿನ ಮರದ ಚಪ್ಪರ ಹಾಕಿದ್ದರು. ನನ್ನ ತಾಯಿಯು ವಾಪಸ್ ಬಾಡಿಗೆ ಆಟೋದಲ್ಲಿ ಮನೆಗೆ ಕರೆದುಕೊಂಡು ಬಂದ್ರು, ನಂತರ ನನ್ನ ತಾಯಿಯು ಮನೆಯಲ್ಲಿ ಅಳುತ್ತಾ ಫೋನ್ ಮಾಡಿದ್ರು ರಿಸೀವ್ ಮಾಡಿಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

18. ಸಾಕ್ಷಿಗೆ ನಂತರ ಆ ದಿನ ರಾತ್ರಿ ಸುಮಾರು 8.00 ಗಂಟೆ ಸುಮಾರಿನಲ್ಲಿ ನನ್ನ ತಾಯಿಯ ಹಿಂದುಗಡೆ ರೂಂ ನಲ್ಲಿ ಫ್ಯಾನ್ ಗೆ ಸ್ಯಾರಿಯಿಂದ ಎರಡು ಹೋಲ್ ಮಾಡಿ ಒಂದು ಅಮ್ಮಳು ಮತ್ತು ಇನ್ನೊಂದು ಹೋಲ್ ನನ್ನ ತಂಗಿ ಅನುಷ್ಕಾಳಿಗೆ ಹಾಕಿದ್ದರು. ಆಗ ನಾನು ನೋಡಿ ಹೋಗಿ ಅವರನ್ನು ಎತ್ತಿದಾಗ, ಅಮ್ಮಳು ಕುತ್ತಿಗೆಗೆ ಹಾಕಿದ್ದ ಸ್ಯಾರಿಯ ಹೋಲ್ ನ್ನು ಬಿಚ್ಚಿ ಅನುಷ್ಕಾಳ ಸ್ಯಾರಿ ಹೋಲನ್ನು ಬಿಚ್ಚಿದಳು ಎಂದು ನ್ಯಾಯಾಲಯದಲ್ಲಿ ಹೇಳಿದ್ದೀಯಾ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿದಿದ್ದಾರೆ.

19. ಮೇಲಿನ ಎಲ್ಲಾ ವಿಷಯಗಳನ್ನು ನೀನು ನ್ಯಾಯಾಲಯದಲ್ಲಿ ಹೇಳಿಲ್ಲದಿದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀಯಾ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿದಿದ್ದಾರೆ.

20. ದಿಃ 20.12.2018 ಮತ್ತು 21.12.2018 ರಂದು ಆರೋಪಿಯ ಮದುವೆ ಚಪ್ಪರದ ಮತ್ತು ಮದುವೆ ದಿನ ಆಗಿತ್ತು ಎಂದರೆ ಸರಿ.

21. ಪದೇ ಪದೇ ನನ್ನ ತಂದೆ ನನ್ನ ತಾಯಿಯ ಮೇಲೆ ಅನುಮಾನ ಪಡುತ್ತಿದ್ದರಿಂದ ಆ ಬಗ್ಗೆ ಮನೆಯಲ್ಲಿ ಗಲಾಟೆ ಆಗುತ್ತಿತ್ತು ಎಂದರೆ ಸರಿಯಲ್ಲ . ಇದರಿಂದ ನಿಮ್ಮ ತಾಯಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಆಗುತ್ತಿತ್ತು ಎಂದರೆ ಸಾಕ್ಷಿ ಯಾವುದೇ ಜಗಳ ಆಗುತ್ತಿರಲಿಲ್ಲ ಎಂದು ನುಡಿದಿದ್ದಾರೆ. ಆ ಹಿಂಸೆ ತಾಳಲಾರದೇ ನಿಮ್ಮ ತಾಯಿ ಮತ್ತು ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಆ ರೀತಿ ಇಲ್ಲ ಎಂದು ನುಡಿದಿದ್ದಾರೆ. ಇದೇ ಕಾರಣದಿಂದ ನೀನು ನಿಮ್ಮ ಅಜ್ಜಿ, ದೊಡ್ಡಪ್ಪ ಮತ್ತು ದೊಡ್ಡಮ್ಮ ಹಾಗೂ ನಿಮ್ಮ ತಾಯಿಯ ಅಕ್ಕನಿಗೆ ನೀನು ಹೇಳಿಲ್ಲ ಎಂದರೆ ಸಾಕ್ಷಿ ಆ ರೀತಿ ಹೇಳುವುದು ಸುಳ್ಳು ಎಂದು ನುಡಿದಿದ್ದಾರೆ. ಆರೋಪಿ ಎಂದು ಸಹ ನನ್ನ ತಾಯಿಗೆ ದುಡ್ಡು ಬಂಗಾರ ಕೊಡು ಎಂದುಹಿಂಸೆ ನೀಡಿಲ್ಲ ಎಂದರೆ ಸರಿಯಲ್ಲ .

22. ನಿನ್ನ ತಂದೆಯ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೀಯಾ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿಲ್ಲ ಎಂದು ನುಡಿದಿದ್ದಾರೆ. ನಿಮ್ಮ ತಾಯಿ ಮತ್ತು ತಂಗಿ ಸಾವಿಗೆ ಆರೋಪಿ ಕಾರಣನಲ್ಲ ಎಂದರೆ ಸಾಕ್ಷಿ ಆರೋಪಿಯೇ ಕಾರಣ ಎಂದು ನುಡಿದಿದ್ದಾರೆ. ನನ್ನ ತಾಯಿ ತೀರಿಕೊಂಡ ಎಷ್ಟು ದಿನದ ನಂತರ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನೀಡಿದ್ದೇನೆ ಎಂದು ಹೇಳಲು ನೆನಪಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . ನ್ಯಾಯಾಲಯದಲ್ಲಿ ಹೇಳಿರುವ ವಿಚಾರ ಸೃಷ್ಟಿ ಮಾಡಿಕೊಂಡು ಹೇಳಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

| | |
|---|---|
| ಪಿ.ಡಬ್ಲ್ಯೂ: | 04 |
| ಸಿ.ಡಬ್ಲ್ಯೂ: | 12 |
| ಪ್ರ.ಬೋ.ದಿನಾಂಕ: | 31.03.2022 . |

| | |
|---|---|
| ಹೆಸರು ::ಶ್ರೀ | ಭಾವನಾ |
| ತಂದೆಯ ಹೆಸರು :: | ಶ್ರೀನಿವಾಸ |
| ವಯಸ್ಸು :: | 16 ವರ್ಷ |
| ಉದ್ಯೋಗ :: | ವಿದ್ಯಾರ್ಥಿ |
| ವಾಸ :: | ದಾವಣಗೆರೆ |

ಸಾಕ್ಷಿಗೆ ನ್ಯಾಯಾಲಯವು ಕೆಲವೊಂದು ಪ್ರಶ್ನೆಗಳನ್ನು ಕೇಳಲಾಗಿ ಸಮರ್ಪಕವಾದ ಉತ್ತರ ಕೊಟ್ಟಿರುತ್ತಾರೆ ಹಾಗೂ ಸಾಕ್ಷಿಯೂ 10 ನೇ ತರಗತಿಯಲ್ಲಿ ಓದುತ್ತಿದ್ದು ಆಕೆಗೆ ಸಂಪೂರ್ಣ ತಿಳುವಳಿಕೆ ಇದ್ದದ್ದು ಕಂಡು ಬರುತ್ತದೆ. ಹೀಗಾಗಿ ಸಾಕ್ಷಿ ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ಶ್ರೀನಿವಾಸ ನನ್ನ ತಂದೆ. ಚಾಸಾ-8 ರೇಣುಕಮ್ಮ ನನ್ನ ಅಜ್ಜಿ. ನಮ್ಮ ಮನೆ ವಿನೋಬನಗರದ 1 ನೇ ಮೇನ್ 6 ನೇ ಕ್ರಾಸ್ ನಲ್ಲಿರುತ್ತದೆ. ನಮಗೆ ಸೇರಿದ ಒಟ್ಟು

5 ಮನೆಗಳಿವೆ. ಕೆಳಗಡೆ ನಮ್ಮ ದೊಡ್ಡಪ್ಪನವರು ವಾಸಮಾಡುತ್ತಿದ್ದೇವು. ಮೊದಲನೇ ಮಹಡಿಯಲ್ಲಿ ನಾವು ವಾಸಮಾಡುತ್ತಿದ್ದೇವು. ಉಳಿದ ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದೇವು. ನಮಗೆ ಸೇರಿದ ಒಂದು ಮನೆಯಲ್ಲಿ ರಾಕೇಶ ಎನ್ನುವವರು ಬಾಡಿಗೆಗೆ ಇದ್ದರು. ನನ್ನ ದೊಡ್ಡಮ್ಮ ಲತಾ ಎನ್ನುವವರು ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು. ನನ್ನ ದೊಡ್ಡಮ್ಮನನ್ನು ನನ್ನ ತಂದೆ ಮತ್ತು ದೊಡ್ಡಪ್ಪ ಬೆಂಗಳೂರಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದರು. ಬೆಂಗಳೂರಿನಲ್ಲಿ 20 ದಿನ ಇದ್ದರು. ಆ ಸಮಯದಲ್ಲಿ ರಾಕೇಶ್ ಎನ್ನುವವನು ನಮ್ಮ ಮನೆಗೆ ಬಂದು ಹೋಗುತ್ತಿದ್ದ. ಆತ ಬೆಳಿಗ್ಗೆ 9.30 ಗಂಟೆಗೆ ಬಂದು ರಾತ್ರಿ 10.00 ಗಂಟೆಗೆ ಹೋಗುತ್ತಿದ್ದ. ಆ ಸಮಯದಲ್ಲಿ ರಾಕೇಶ ಎನ್ನುವವನು ನಮ್ಮ ಅಮ್ಮನಿಗೆ ಹೊಡೆಯುತ್ತಿದ್ದ, ಈ ವಿಚಾರ ನನ್ನ ತಂದೆಗೆ ಗೊತ್ತಾಗಿ, ನಾವು ಕುವೆಂಪು ನಗರದ ಬೇರೆ ಮನೆಗೆ ಹೋದೇವು.

ಆರೋಪಿ ಗೈರು ಹಾಜರಿರುವುದರಿಂದ ಆರೋಪಿಯ ಹಾಜರಾತಿಗಾಗಿ ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

| | |
|---|---|
| ಪಿ.ಡಬ್ಲ್ಯೂ | 03 |
| ಸಿ.ಡಬ್ಲ್ಯೂ | 04 |
| ಪ್ರ.ಬೋ.ದಿನಾಂಕಃ | 11-11-2021 |

| | |
|---|---|
| ಹೆಸರು :: | ಶ್ರೀ ಹೆಚ್ ಆರ್ ಉಮೇಶ |
| ತಂದೆಯ ಹೆಸರು :: | ರೇವಣಸಿದ್ದಪ್ಪ |
| ವಯಸ್ಸು :: | 39 ವರ್ಷ |
| ಉದ್ಯೋಗ :: | ಬ್ಯಾಂಕ್ ನಲ್ಲಿ ಕೆಲಸ |
| ವಾಸ :: | ಹರಿಹರ |

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಮೃತೆ ವಸಂತ ನನ್ನ ಅತ್ತೆಯ ಮಗಳು. ಪಿರ್ಯಾದಿ ಶ್ರೀನಿವಾಸ ಸದರಿ ವಸಂತರವರ ಗಂಡ. ಭಾವನಾ ಮತ್ತು ಅನುಷ್ಕಾ ಎನ್ನುವವರು ಇಬ್ಬರೂ ಅವರ ಮಕ್ಕಳು. ಇವರು ವಿನೋಬನಗರದಲ್ಲಿ ವಾಸಮಾಡುತ್ತಿದ್ದರು.

2. ಆರೋಪಿ ಪಿರ್ಯಾದಿಯ ಮನೆಯಲ್ಲಿ ಬಾಡಿಗೆದಾರನಾಗಿ ವಾಸಮಾಡುತ್ತಿದ್ದ. ಆರೋಪಿ ಲಾರಿ ಚಾಲಕನಾಗಿರುತ್ತಾನೆ. ಚಾಸಾ-1ರವರು ನ್ಯೂಸ್ ಪೇಪರ್ ಅಂಗಡಿಗೆ

ಹೋದ ನಂತರ ಆರೋಪಿ ಪಿರ್ಯಾದಿಯ ಮನೆಗೆ ಹೋಗಿ ದುಡ್ಡು ಕೊಡು, ಬಂಗಾರ ಕೊಡು ಎಂದು ವಸಂತಕುಮಾರಿಯ ಬಳಿ ಕೇಳುತ್ತಿದ್ದ. ಈ ಬಗ್ಗೆ ನಾವು 3 ಬಾರಿ ಪಂಚಾಯಿತಿ ಮಾಡಿದ್ದೇವೆ. ಆ ರೀತಿ ಪಂಚಾಯಿತಿ ಮಾಡಿ ಬುದ್ದಿವಾದ ಹೇಳಿದರು ಸಹ ಆರೋಪಿ ಅದೇ ರೀತಿ ತೊಂದರೆ ಕೊಡುತ್ತಿದ್ದರಿಂದ ಪಿರ್ಯಾದಿಗೆ ನಾವು ಬೇರೆ ಕಡೆ ಮನೆ ಮಾಡಿ ಎಂದು ಹೇಳಿದ್ದೇವು. ಅದರಂತೆ ಅವರು ಕುವೆಂಪು ನಗರದಲ್ಲಿ ಮನೆ ಮಾಡಿದ್ದರು. ಅಲ್ಲಿಗೂ ಸಹ ಆರೋಪಿ ಹೋಗಿ ಅವರಿಗೆ ತೊಂದರೆ ಕೊಡುತ್ತಿದ್ದ.

3. ದಿಃ20.12.2018 ರಂದು ಸಂಜೆ ನನ್ನ ಸಂಬಂಧಿಕರು ಫೋನ್ ಮಾಡಿ ವಸಂತಕುಮಾರಿ ಮತ್ತು ಅವರ ಮಗಳು ನೇಣು ಹಾಕಿಕೊಂಡಿದ್ದರೆಂದು ವಿಷಯ ಗೊತ್ತಾಯಿತು. ಸದರಿ ವಿಷಯವನ್ನು ತಿಳಿದು ನಾನು ಕೂಡಲೇ ಮನೆಗೆ ಬಂದು ನೋಡಿದಾಗ ಅವರಿಬ್ಬರೂ ಮನೆಯ ಫ್ಯಾನ್ ಗೆ ನೇಣು ಹಾಕಿಕೊಂಡಿದ್ದರು. ನಂತರ ಪೊಲೀಸರು ಶವಗಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ.

4. ಮಾರನೇ ದಿನ ಆಸ್ಪತ್ರೆಗೆ ಪೊಲೀಸರು ಬಂದು ಶವ ಪಂಚನಾಮೆ ಮಾಡಿದ್ದಾರೆ. ಆಗ ಸಮಯ ಬೆಳಿಗ್ಗೆ 8.00 ರಿಂದ 10.00 ಗಂಟೆ ಆಗಿತ್ತು. ನಾನು, ನನ್ನ ಸಂಬಂಧಿಕರು ಹಾಗೂ ಬೇರೆಯವರು ಆ ಸಮಯದಲ್ಲಿ ಇದ್ದೇವು. ಪೋಲೀಸರು ಶವ ಪಂಚನಾಮೆ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ. ಸದರಿ ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿಪಿ-19 ರಿಂದ ನಿಪಿ-26 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯೇ ರಾಕೇಶ ಆಗಿರುತ್ತಾನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ**

5. ನಾವು 2–3 ಬಾರಿ ಪಂಚಾಯಿತಿ ಮಾಡಿದಾಗ ಪಂಚಾಯಿತಿದಾರರಾಗಿ ನಾನು, ಸಿದ್ದೇಶ, ನಾಗರಾಜ ಎನ್ನುವವರು ಸೇರಿದ್ದೇವು. ಸೆಪ್ಟೆಂಬರ್, ನವೆಂಬರ್ ತಿಂಗಳಿನಲ್ಲಿ ವಿನೋಬನಗರದ ಪಿರ್ಯಾದಿಯ ಮನೆಯಲ್ಲಿ ಪಂಚಾಯಿತಿ ಮಾಡಿದ್ದೇವೆ. ಸಾಕ್ಷಿಗೆ ಈ ವಿಷಯವನ್ನು ಆರೋಪಿ ಅಪ್ಪ ಅಮ್ಮನಿಗೆ ತಿಳಿಸಲು ಪ್ರಯತ್ನ ಪಟ್ಟರಾ ಎಂದರೆ ಸಾಕ್ಷಿ ಅವರು ನಮಗೆ ಸಿಕ್ಕಿಲ್ಲ ಎಂದು ನುಡಿದಿದ್ದಾರೆ. ನಾನು ಸ್ವತಃ ಪೊಲೀಸರಿಗೆ ಯಾವುದೇ ದೂರನ್ನು ಕೊಡಲು ಪ್ರಯತ್ನ ಮಾಡಿಲ್ಲ. ಪಿರ್ಯಾದಿಗೆ ದೂರು ಕೊಡಲು ನಾನು ಹೇಳಿದ್ದೇನೆ. ಬೇರೆ ಮನೆ ಮಾಡಿದಾಗ ಸದರಿ ವಿಷಯ ನನಗೆ ಗಮನಕ್ಕೆ ಬರಲಿಲ್ಲ ಆದರೆ ನೇಣು ಹಾಕಿಕೊಂಡಾಗ ಆ ವಿಚಾರ ಗೊತ್ತಾಗಿತ್ತು. ಆರೋಪಿ ಬಂದು ಹಣ ಮತ್ತು ಬಂಗಾರಕ್ಕಾಗಿ ಪೀಡಿಸುತ್ತಿದ್ದ ಈ ಬಗ್ಗೆ 2–3 ಬಾರಿ ಪಂಚಾಯಿತಿ ಮಾಡಿದ್ದೇವೆ ಎನ್ನುವ ವಿಚಾರ ಪೊಲೀಸರಿಗೆ ಹೇಳಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಪಂಚನಾಮೆ ಮಾಡಿಲ್ಲ, ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಅವರಿಬ್ಬರ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ನನ್ನ ಸಂಬಂಧಿಕಾರು ಆಗಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪಿರ್ಯಾದಿ ತನ್ನ ಹೆಂಡತಿ ಮತ್ತು ಮಗಳಿಗೆ ಹಿಂಸೆ ಕೊಟ್ಟದ್ದರಿಂದ ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆ ಎಂದು ಪ್ರಶ್ನಿಸಲಾಗಿ ಇಲ್ಲ ಎಂದು ನುಡಿದಿದ್ದಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ 05/2020

| | |
|---|---|
| ಪಿ.ಡಬ್ಲ್ಯೂ | 02 |
| ಸಿ.ಡಬ್ಲ್ಯೂ | 03 |
| ಪ್ರ.ಬೋ.ದಿನಾಂಕಃ | 11-11-2021 |

| | |
|---|---|
| ಹೆಸರು ::ಶ್ರೀ | ಹನುಮಂತರಾವ್ ಹೆಚ್ ಎನ್ |
| ತಂದೆಯ ಹೆಸರು :: | ನಾರಾಯಣರಾವ್ |
| ವಯಸ್ಸು :: | 49 ವರ್ಷ |
| ಉದ್ಯೋಗ :: | ಆಟೋ ಕನ್ಸಲ್ಟೆನ್ಸಿ ವರ್ಕ್ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆಃ** ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನ್ನ ಮನೆ ಕುವೆಂಪು ನಗರದಲ್ಲಿ ಬರುತ್ತದೆ. ಪಿರ್ಯಾದುದಾರರ ಮನೆ ನಮ್ಮ ಮನೆಯಿಂದ 150 ಅಡಿ ದೂರದಲ್ಲಿದೆ.

2. ಇಲ್ಲಿಗೆ 3 ವರ್ಷದ ಹಿಂದೆ ಪಿರ್ಯಾದಿಯ ಹೆಂಡತಿ ಮತ್ತು ಕಿರಿಯ ಮಗಳು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡಿದ್ದರು. ಸದರಿ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿದ್ದಾರೆ. ಆಗ ಸಮಯ ರಾತ್ರಿ 9.00 ರಿಂದ 10.00 ಗಂಟೆ ಆಗಿತ್ತು. ಆ

ಸಮಯದಲ್ಲಿ ನಾನು ಹಾಗೂ ಬೇರೆಯವರು ಸಹ ಇದ್ದೇವು. ಆ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದಾರೆ ಹಾಗೂ ಪೊಲೀಸರು ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ ಸೀರೆಗಳನ್ನು ಜಪ್ತಿ ಮಾಡಿದ್ದಾರೆ. ಪೊಲೀಸರು ಶವವನ್ನು ಆ್ಯಂಬುಲೆನ್ಸ ನಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ.

3. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-3 ರಿಂದ ನಿಪಿ-18 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಜಪ್ತಿ ಮಾಡಿದ ಸೀರೆಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿ ದುಡ್ಡು ಮತ್ತು ಬಂಗಾರ ಕೊಡಿ ಎಂದು ಮೃತಳಿಗೆ ಹಿಂಸೆ ಕೊಡುತ್ತಿದ್ದರಿಂದ ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆಂದು ಗೊತ್ತಾಯಿತು.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

4. ಪೊಲೀಸರು ನನಗೆ ಸ್ಥಳಕ್ಕೆ ಬನ್ನಿ ಎಂದು ನೋಟೀಸ್ ಕೊಟ್ಟಿಲ್ಲ. ದಿಃ 20.12.2018 ರಂದು ನಾನು ಮಹಜರಿಗೆ ಸಹಿ ಮಾಡಿದ್ದೇನೆ. ಪೊಲೀಸರು ಮಹಜರನ್ನು ಬರೆದಿರುತ್ತಾರೆ. ಪೊಲೀಸರಿಗೆ ನಾನು ಹೇಳಿದ್ದನ್ನು ಕೇಳಿಸಿಕೊಂಡು ಮಹಜರನ್ನು ಬರೆದಿದ್ದಾರೆ. ಪಂಚನಾಮೆ ಸಮಯದಲ್ಲಿ ತೀರಿಕೊಂಡಿದ್ದವರ ಕಡೆಯವರು, ಪೊಲೀಸರು ಇದ್ದರು. ಪಂಚನಾಮೆ ಸಮಯದಲ್ಲಿ ಸುಮಾರು 20-25 ಜನ ಸೇರಿದ್ದರು. ಮನೆಯ ಒಳಗಡೆ 5-6 ಜನ ಮಾತ್ರ ಇದ್ದರು. ಆರೋಪಿ ಹಣ ಮತ್ತು ಬಂಗಾರಕ್ಕೆ ಹಿಂಸೆ ಕೊಟ್ಟಿದ್ದರಿಂದ

ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿರುವ ಎಲ್ಲಾ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 01 |
| ಸಿ.ಡಬ್ಲ್ಯೂ: | 01 |
| ಪ್ರ.ಬೋ.ದಿನಾಂಕ: | 11-11-2021 |

| | |
|---|---|
| ಹೆಸರು ::ಶ್ರೀ | ಶ್ರೀನಿವಾಸ |
| ತಂದೆಯ ಹೆಸರು :: | ಕೆ ಎಲ್ ಸಿದ್ದಪ್ಪ |
| ವಯಸ್ಸು :: | 51 ವರ್ಷ |
| ಉದ್ಯೋಗ :: | ವ್ಯಾಪಾರ |
| ವಾಸ :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-8 ನನ್ನ ಅತ್ತೆ. ಚಾಸಾ-12 ನನ್ನ ಮಗಳು. ಚಾಸಾ-17 ನನ್ನ ಹೆಂಡತಿಯ ಅಕ್ಕ. ನನಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ಎಸ್ ಎಸ್ ಭಾವನಾ ಮತ್ತು ಮೃತೆ ಅನುಷ್ಕಾ. ಮೃತೆ ವಸಂತ ನನ್ನ ಹೆಂಡತಿ.

2. ಮೊದಲು ನನ್ನ ಮನೆ ದಾವಣಗೆರೆಯ 1 ನೇ ಮೇನ್, 6 ನೇ ಕ್ರಾಸ್, ವಿನೋಬನಗರದಲ್ಲಿದೆ. ನೆಲಮಹಡಿಯಲ್ಲಿ ನನ್ನ ಅಣ್ಣ ವಾಸಮಾಡುತ್ತಿದ್ದ. ಮೊದಲನೇ

ಮಹಡಿಯಲ್ಲಿ ನಾನು, ನನ್ನ ಕುಟುಂಬದವರು ವಾಸಮಾಡಿಕೊಂಡಿದ್ದೇವು. ನಮ್ಮ ಮನೆಯ ಪಕ್ಕದಲ್ಲಿ ಇರುವ ನನ್ನ ಮತ್ತೊಂದು ಮನೆ ಖಾಲಿ ಇತ್ತು. ಸದರಿ ಮನೆಯನ್ನು ಆರೋಪಿಗೆ ಬಾಡಿಗೆಗೆ ಕೊಟ್ಟಿದ್ದೆ. 2017 ರಲ್ಲಿ ಆರೋಪಿ ಆ ರೀತಿ ಸದರಿ ಮನೆಯಲ್ಲಿ ಬಾಡಿಗೆಗೆ ಇದ್ದ. ಆ ಸಮಯದಲ್ಲಿ ನನ್ನ ಅಣ್ಣನ ಹೆಂಡತಿಗೆ ಕ್ಯಾನ್ಸರ್ ಆಗಿತ್ತು. ನಾನು ಬುಕ್ ಸ್ಟಾಲ್ ಇಟ್ಟಿದ್ದರಿಂದ ಸಾಮಾನ್ಯವಾಗಿ ಬೆಳಿಗ್ಗೆ 8.00 ಕ್ಕೆ ಮನೆ ಬಿಡುತ್ತಿದ್ದೆ. ನನ್ನ ಮನೆಯಲ್ಲಿ ನನ್ನ ಹೆಂಡತಿ ಮತ್ತು ನನ್ನ ಎರಡು ಮಕ್ಕಳು ಇರುತ್ತಿದ್ದರು. ನನ್ನ ಎರಡು ಮಕ್ಕಳು ಆಗ ಶಾಲೆಗೆ ಹೋಗುತ್ತಿದ್ದರು.

3. ನನ್ನ ಹೆಂಡತಿ ಮತ್ತು ಮಕ್ಕಳು, ಆರೋಪಿ ರಾಕೇಶ ಬಂದು ದುಡ್ಡು ಕೊಡಿ, ಬಂಗಾರ ಕೊಡಿ ಎಂದು ಪೀಡಿಸುತ್ತಾನೆಂದು ನನಗೆ ಹೇಳಿದ್ದರು. ಈ ಬಗ್ಗೆ ನಾನು ಕರೆದು ಬುದ್ದಿವಾದ ಹೇಳಿದ್ದೆ. ನಾನು ಆ ರೀತಿ ಬುದ್ದಿ ಹೇಳಿದ್ದಕ್ಕೆ ಆರೋಪಿ ನನಗೆ ಬೆದರಿಕೆ ಹಾಕಿದ್ದ. ಆ ರೀತಿ ಬೆದರಿಕೆ ಹಾಕಿದ್ದರಿಂದ ನಾನು ನಮ್ಮ ಮನೆಯನ್ನು ಖಾಲಿ ಮಾಡಿಕೊಂಡು ಕುವೆಂಪು ನಗರದಲ್ಲಿ ಮನೆ ಮಾಡಿಕೊಂಡು ವಾಸಮಾಡುತ್ತಿದ್ದೆ. ನಾವು ಅಲ್ಲಿ ವಾಸಮಾಡುತ್ತಿದ್ದಾಗಲೂ ಸಹ ಆರೋಪಿ ನಮ್ಮ ಮನೆಯ ಬಳಿ ಬಂದು ದುಡ್ಡು ಕೊಡಿ, ಬಂಗಾರ ಕೊಡಿ ಎಂದು ತೊಂದರೆ ಕೊಡುತ್ತಿದ್ದ.

4. ದಿಃ 20.12.2018 ರಂದು ಬೆಳಿಗ್ಗೆ ನಾನು ನನ್ನ ಬುಕ್ ಸ್ಟಾಲ್ ಗೆ ಹೋಗಿದ್ದಾಗ, ಆ ಸಮಯದಲ್ಲಿ ನನ್ನ ಹೆಂಡತಿ ಮತ್ತು ನನ್ನ ಕಿರಿಯ ಮಗಳಾದ ಅನುಷ್ಕಾ ಮನೆಯಲ್ಲಿದ್ದರು. ಆ ಸಮಯದಲ್ಲಿ ನನ್ನ ಸದರಿ ಮಗಳಿಗೆ ಆರೋಗ್ಯ ಸರಿ ಇರಲಿಲ್ಲ. ನನ್ನ ಹಿರಿಯ ಮಗಳು ಶಾಲೆಗೆ ಹೋಗಿದ್ದಳು. ಆ ದಿನ ಸಂಜೆ 5.00 ರಿಂದ 5.15 ಸಮಯದಲ್ಲಿ ನನ್ನ ಹಿರಿಯ ಮಗಳು ಎಸ್ ಎಸ್ ಭಾವನಾ ಕರೆ ಮಾಡಿ, ಅಮ್ಮ ಬಾಗಿಲು ತೆಗೆಯುತ್ತಿಲ್ಲ ಬನ್ನಿ ಎಂದು

ಕರೆದಳು. ಆಗ ಕೂಡಲೇ ಮನೆಯ ಬಳಿ ಬಂದೆ. ಅಷ್ಟರಲ್ಲಿ ನನ್ನ ಹೆಂಡತಿಯ ಅಕ್ಕ ಉಷಾ ಮತ್ತು ನನ್ನ ಹೆಂಡತಿಯ ತಾಯಿ ರೇಣುಕಮ್ಮ ಅಲ್ಲಿಗೆ ಬಂದಿದ್ದರು. ನಾವುಗಳೆಲ್ಲಾ ಸೇರಿಕೊಂಡು ಬಾಗಿಲು ತೆಗೆದೇವು. ಆದರೆ ಯಾವುದೇ ಪ್ರತಿಕ್ರಿಯ ಮನೆಯ ಒಳಗಿನಿಂದ ಬರಲಿಲ್ಲ. ನಂತರ ನಾವು ಬಾಗಿಲ ಪಕ್ಕದಲ್ಲಿದ್ದ ಗ್ಲಾಸ್ ನ ಕಿಟಕಿಯನ್ನು ಹೊಡೆದೆ. ಹೊಡೆದ ಗ್ಲಾಸ್ ನ ಕಿಟಕಿಯ ಮೂಲಕ ಒಳ ಭಾಗದ ಬೋಲ್ಟ್ ನ್ನು ನಾನು ತೆಗೆದೆ. ನಾವುಗಳೆಲ್ಲಾ ಮನೆಯ ಒಳಗಡೆ ಹೋದಾಗ ಮನೆಯ ಮಧ್ಯಭಾಗದ ಪ್ಯಾನ್ ಗೆ ನನ್ನ ಹೆಂಡತಿ ಮತ್ತು ಮಗಳು ನೇಣು ಹಾಕಿಕೊಂಡಿದ್ದರು. ಆರೋಪಿ ಕೊಡುತ್ತಿದ್ದ ಹಿಂಸೆಯಿಂದ ನನ್ನ ಹೆಂಡತಿ ಮತ್ತು ಮಗಳು ನೇಣು ಹಾಕಿಕೊಂಡಿದ್ದರು.

5. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿದ್ದೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ಸಿದ್ದೇಶ ಎನ್ನುವವರ ಕಡೆಯಿಂದ ಹೇಳಿ ಬರೆಸಿದ್ದೇನೆ.

6. ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ನೇಣು ಸ್ಥಿತಿಯಲ್ಲಿದ್ದ ಶವಗಳನ್ನು ಬಿಚ್ಚಿ ಪೋಟೋಗಳನ್ನು ತೆಗೆದುಕೊಂಡಿದ್ದಾರೆ. ಆ ಸಮಯದಲ್ಲಿ ನಾನು, ನನ್ನ ಸಂಬಂಧಿಕರು ಹಾಗೂ ಇಬ್ಬರು ಬೇರೆಯವರು ಸಹ ಇದ್ದರು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿ, ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ ಸೀರೆಗಳನ್ನು ಜಪ್ತಿ ಮಾಡಿದ್ದಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ.

7. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿ**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ** ನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-3 ರಿಂದ ನಿಪಿ-18 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಜಪ್ತಿ ಮಾಡಿದ ಸೀರೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸೀಲ್ ಆಗಿರುವ ಬಟ್ಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಸಾಕ್ಷಿ 2 ಸೀರೆಗಳನ್ನು ಗುರುತಿಸಿದ್ದು, ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಲಾಯಿತು. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ರಾಕೇಶ ಆಗಿರುತ್ತಾನೆ.

8. ನಂತರ 2 ಶವಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಕಾಲಾವಕಾಶವನ್ನು ಕೋರಿದ್ದು, ರೂ.500/- ಖರ್ಚಿನ ಸಮೇತ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.